**ಮಾನ್ಯ ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ಪ್ರೇಮಾ ಮಹಾಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ದಿನಾಂಕ 17-06-2013ರಂದು ಬೆಳಗ್ಗೆ 11.00 ಗಂಟೆಗೆ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಸಾಮಾನ್ಯ ಸಭೆಯ ನಡವಳಿಗಳು :**

*******

**ಹಾಜರಿ : ಹಾಜರಾತಿ ವಹಿಯಲ್ಲಿದ್ದಂತೆ.**

*********

ಸಭೆಯ ಆರಂಭದಲ್ಲಿ ಸಭೆಯ ಮಾನ್ಯ ಅಧ್ಯಕ್ಷರು, ಉಪಾಧ್ಯಕ್ಷರು, ಶಾಸಕರು, ಜಿಲ್ಲಾ ಪಂಚಾಯತ್ ಸದಸ್ಯರುಗಳು, ತಾಲ್ಲೂಕು ಪಂಚಾಯತ್ ಅಧ್ಯಕ್ಷರುಗಳು, ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಜಿಲ್ಲಾ/ತಾಲ್ಲೂಕು ಮಟ್ಟದ ಅಧಿಕಾರಿಗಳು ಹಾಗೂ ಪತ್ರಿಕಾ ಮಾಧ್ಯಮ ದವರುಗಳನ್ನು ಉಪ ಕಾರ್ಯದರ್ಶಿ(ಆಡಳಿತ), ಜಿಲ್ಲಾ ಪಂಚಾಯತ್, ತುಮಕೂರು ಇವರು ಸಭೆಗೆ ಸ್ವಾಗತಿಸಿ, ಮಾನ್ಯ ಅಧ್ಯಕ್ಷರು ಸಭೆಯ ಕಾರ್ಯಕಲಾಪಗಳನ್ನು ನಡೆಸಿಕೊಡಬೇಕೆಂದು ವಿನಂತಿಸಿದರು.

ಅದರಂತೆ ಸಭೆಯ ಮಾನ್ಯ ಅಧ್ಯಕ್ಷರು ಮತ್ತೊಮ್ಮೆ ಎಲ್ಲರನ್ನೂ ಸಭೆಗೆ ಸ್ವಾಗತ ಕೋರಿದ ನಂತರ ಅಜೆಂಡಾವಾರು ಚರ್ಚೆಯನ್ನು ಪ್ರಾರಂಭಿಸಿದರು.

**ವಿಷಯ ಸಂಖ್ಯೆ.1 :- ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಚರ್ಚಿಸುವುದು.**

ಸಭೆಯ ಮಾನ್ಯ ಅಧ್ಯಕ್ಷರು ಮಾತನಾಡಿ, ಜಿಲ್ಲಾ ಪಂಚಾಯತ್ ಕ್ಷೇತ್ರಗಳಲ್ಲಿನ ಕುಡಿಯುವ ನೀರಿನ ಸಮಸ್ಯೆಯ ಕುರಿತು ಪ್ರತಿಯೊಬ್ಬ ಸದಸ್ಯರು ತಮ್ಮ ಕ್ಷೇತ್ರದಲ್ಲಿನ ಸಮಸ್ಯೆಯ ಬಗ್ಗೆ ಚರ್ಚಿಸಲು ಕೋರಿದರು.

ಅದರಂತೆ, ಮೊದಲಿಗೆ ಜಿ.ಪಂ. ಮಾನ್ಯ ಸದಸ್ಯರಾದ ಶ್ರೀ ಎನ್.ಆರ್. ಆನಂದರವಿ ಯವರು ಮಾತನಾಡಿ ಅವರ ಕ್ಷೇತ್ರದ ರಜತಾದ್ರಿಪುರ,ಕಸಬಾ ಹೋಬಳಿ ಹೊನ್ನವಳ್ಳಿ ಗ್ರಾಮಗಳಲ್ಲಿ ನೀರಿಗೆ ತೀವ್ರ ತೊಂದರೆಯಾಗಿದೆ ಹಾಗೂ 17 ಗ್ರಾಮಗಳಲ್ಲಿ ಟ್ಯಾಂಕರ್ ಮುಖಾಂತರ ನೀರು ಸರಬರಾಜು ಮಾಡಲಾಗಿದೆ. ಆದರೆ ಇಲ್ಲಿಯವರೆವಿಗೂ ಹಣ ಪಾವತಿಸಿರುವುದಿಲ್ಲ. ಆದ್ದರಿಂದ ನೀರು ಸರಬರಾಜು ಮಾಡಲು ತೊಂದರೆಯಿರುತ್ತದೆ ಎಂದು ತಿಳಿಸಿದರು. ಅಂತರ್ಜಲದ ಮಟ್ಟ ಕುಸಿದಿದ್ದು 700-800 ಅಡಿ ಕೊರೆದರು ನೀರು ಬರುತ್ತಿಲ್ಲ. ಈ ಸಮಸ್ಯೆಗಳನ್ನು ಬಗೆಹರಿಸಲು ಕೋರಿದರು. MGNREGA ಅಡಿ ಕೂಲಿಕಾರರಿಗೆ ಸರಿಯಾದ ಸಮಯಕ್ಕೆ ಹಣ ಪಾವತಿಸದೆ ಇರುವುದರಿಂದ ಯೋಜನೆಯ ಪ್ರಗತಿಯಲ್ಲಿ ಹಿನ್ನಡೆಯಾಗಿದೆ; ನಿಷ್ಕ್ರಿಯಗೊಂಡಿರುವ ಕೊಳವೆಬಾವಿಗಳಲ್ಲಿನ (ಗ್ರಾ.ಪಂ.ನಲ್ಲಿ ನಿರ್ವಹಿಸಲಾಗಿದ್ದ) ಮೋಟಾರು ಪಂಪುಗಳು ಕಾಣೆಯಾಗಿವೆ; ಹಳೇ ಮೋಟಾರುಗಳನ್ನು ದುರಸ್ತಿ ಮಾಡಿಸಲಾಗುತ್ತಿದೆ. ಈ ಬಗ್ಗೆ ತನಿಖೆ ಮಾಡಿಸಬೇಕು; ಪ್ರಸ್ತುತ ದಿನಗಳಲ್ಲಿ ನೀರಿನ ಸಮಸ್ಯೆಯೇ ಇಲ್ಲದ ಗ್ರಾಮಗಳಿಲ್ಲ; ಆದುದರಿಂದ ನೀರು ಪೂರೈಕೆಗೆ ಹೆಚ್ಚುವರಿ ಅನುದಾನದ ಬಿಡುಗಡೆಗೆ ಕೋರಿ ಈ ಸಭೆಯ ಮೂಲಕ ಸರ್ಕಾರಕ್ಕೆ ನಿರ್ಣಯ ಕಳುಹಿಸಿ ಅನುದಾನ ಬಿಡುಗಡೆ ಮಾಡಿಸಿದಲ್ಲಿ ನೀರಿನ ಸಮಸ್ಯೆ ಬಗೆಹರಿಸಬಹುದು ಎಂದು ಸಭೆಯ ಗಮನಕ್ಕೆ ತಂದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀಮತಿ ಸುಮನಾ ರವರು ಮಾತನಾಡಿ, ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ (ಸೋಲರಮಾವು,ಉಪ್ಪಾರಹಳ್ಳಿ ತಾಂಡ್ಯ ಗ್ರಾಮಗಳಲ್ಲಿ) ಕೊಳವೆ ಬಾವಿ ಕೊರೆದಿದ್ದು ಬಳಸಲು ಯೋಗ್ಯವಾಗಿರುವುದಿಲ್ಲ. ನೀರಿನಲ್ಲಿ ಫ್ಲೋರೈಡ್ ಅಂಶ ಹೆಚ್ಚಾಗಿರುವುದರಿಂದ, ಶುದ್ಧ ನೀರಿಗೆ ವ್ಯವಸ್ಥೆ ಮಾಡಿಕೊಟ್ಟು, ದನಕರುಗಳಿಗೆ ನೀರಿಗಾಗಿ ಕೃಷಿಹೊಂಡ, ತೊಟ್ಟಿಗಳನ್ನು ನಿರ್ಮಿಸಿ ಶಾಲೆಗಳಿಗೆ ಕೊಳವೆಬಾವಿಗಳನ್ನು ಕೊರೆಸಿ ನೀರಿಗೆ ವ್ಯವಸ್ಥೆಗೊಳಿಸಿಕೊಡಬೇಕೆರಂದು ಕೋರಿದರು.

ಶ್ರೀಮತಿ ಜಾನಮ್ಮರಾಮಚಂದ್ರಯ್ಯ ನವರು ಮಾತನಾಡಿ ಉಪ್ಪಾರಹಳ್ಳಿ ತಾಂಡ್ಯ ಇನ್ನು ಅನೇಕ ಗ್ರಾಮಗಳಲ್ಲಿ ನೀರಿನ ಸಮಸ್ಯೆ ಹೆಚ್ಚಾಗಿ ದನಕರುಗಳಿಗೆ ಸಾರ್ವಜನಿಕರಿಗೆ ತೊಂದರೆಯಾಗಿದೆ. ಈ ಬಗ್ಗೆ ಸಮಸ್ಯೆ ಬಗೆಹರಿಸುವಂತೆ ಕೋರಿದರು. ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ಆರ್.ಸಿ.ಆಂಜಿನಪ್ಪನವರು ಮಾತನಾಡಿ, ಜಿಲ್ಲೆಯಲ್ಲಿ ಪಾವಗಡ ತಾಲ್ಲೂಕು ಹೆಚ್ಚಿನ ಬರಗಾಲಕ್ಕೆ ತುತ್ತಾಗಿದ್ದು, ಇಲ್ಲಿಗೆ 65 ಕೊಳವೆಬಾವಿಗಳು ಮಂಜೂರಾಗಿದ್ದು, ಈವರೆಗೆ ಕೇವಲ 40 ಕೊಳವೆಬಾವಿಗಳನ್ನು ಮಾತ್ರ ಕೊರೆಸಲಾಗಿದ್ದು, ಇನ್ನೂ 25 ಕೊಳವೆಬಾವಿಗಳು ಕೊರೆಯಲು ಬಾಕಿ ಇವೆ; ಅವುಗಳನ್ನು ಕೊರೆಸಿ ಜನರಿಗೆ ನೀರು ಒದಗಿಸಬೇಕು; ತಾಲ್ಲೂಕಿನ ಕನಕಾಪುರದಲ್ಲಿ 03ತಿಂಗಳ ಹಿಂದೆ ಬೋರ್ ಕೊರೆದು ಸರ್ವಿಸ್ ಮಾಡಿ ಜನರಿಗೆ ನೀರುಕೊಟ್ಟಿಲ್ಲ ಇದೇ ರೀತಿ ಅನೇಕ ಕಡೆ ಸಮಸ್ಯೆ ಇದೆ. ಕೊರೆಸಿರುವ ಕೊಳವೆಬಾವಿಗೆ ಪೈಪ್ ಲೈನ್ ಮಾಡಿಸಿ ಜನ-ಜಾನುವಾರುಗಳಿಗೆ ತುರ್ತಾಗಿ ನೀರಿನ ವ್ಯವಸ್ಥೆ ಕಲ್ಪಿಸಿಕೊಡಬೇಕು; ತಾಲ್ಲೂಕಿನಲ್ಲಿ ಸುಮಾರು 350 ಗ್ರಾಮಗಳಿದ್ದು, ಈ ಪೈಕಿ ಸರಿ ಸುಮಾರು 250 ಗ್ರಾಮಗಳಲ್ಲಿ ನೀರು ಫ್ಲೋರೈಡ್ ಯುಕ್ತವಾಗಿ ಬಳಕೆಗೆ ಯೋಗ್ಯವಾಗಿರುವುದಿಲ್ಲ, ಈ ಸಂಬಂಧ 144 ಡೀಫ್ಲೋರೈಡ್ ಪ್ಲಾಂಟ್ ಗಳನ್ನು ಒದಗಿಸಬೇಕು; ಕೆಲವು ಅಂಗನವಾಡಿ ಮತ್ತು ಶಾಲೆಗಳಲ್ಲಿ ಉಪಾಧ್ಯಾಯರುಗಳು ತಮ್ಮ ಸ್ವಂತ ಹಣ ಕೊಟ್ಟು ಮಕ್ಕಳಿಗೆ ಕುಡಿಯುವ ನೀರು ಒದಗಿಸುತ್ತಿದ್ದಾರೆ; ಈ ಸಂಬಂಧ 135 ಅಂಗನವಾಡಿಗಳು ಹಾಗೂ 165 ಶಾಲೆಗಳ ಪಟ್ಟಿ ಸಲ್ಲಿಸಲಾಗಿದ್ದು, ಅವುಗಳಿಗೆ ಶುದ್ಧ ಕುಡಿಯುವ ನೀರು ಪೂರೈಸಬೇಕು; ಹಾಗೂ ಕೆ.ಇ.ಬಿ.ಯವರು ಕೇವಲ shifting charge ಪಡೆದು ಕೊಳವೆಬಾವಿಗಳಿಗೆ ಸರ್ವೀಸ್ ಕೊಡುವಂತೆ ವ್ಯವಸ್ಥೆಗೊಳಿಸಿಕೊಡಬೇಕು ಎಂದು ಸಭೆಗೆ ತಿಳಿಸಿದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀಮತಿ ಲೋಹಿತಾಬಾಯಿಯವರು ಮಾತನಾಡಿ, ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ಬರ ಪರಿಹಾರ ಕಾರ್ಯಕ್ರಮದಡಿ ಸಾವಿರಕಟ್ಟೆಪಾಳ್ಯ, ತಿಮ್ಮನಹಳ್ಳಿ, ಜೋಡಿಕಟ್ಟೆಹಳ್ಳಿ ಮುಂತಾದ ಗ್ರಾಮಗಳಲ್ಲಿ ಕೊರೆಯಲಾಗಿರುವ ಕೊಳವೆಬಾವಿಗಳಿಗೆ ಕೆ.ಇ.ಬಿ.ವತಿಯಿಂದ ಸಂಪರ್ಕ ಕಲ್ಪಿಸಿಕೊಡಬೇಕು (service) ಎಂದು ಕೋರಿದರು.

ಮಾನ್ಯ ಶ್ರೀಮತಿ ರಾಧದೇವರಾಜು ರವರು ಮಾತನಾಡಿ, ಮಂಚಕಲ್ ಕುಪ್ಪೆ ಗ್ರಾಮದಲ್ಲಿ ನೀರಿಗೆ ಕೊರತೆಯಿದ್ದು, ಕೊಳವೆಬಾವಿಗೆ ಪಾಯಿಂಟ್ ಮಾಡಲಾಗಿರುತ್ತದೆ; ಈ ಸಂಬಂಧ ತುರ್ತಾಗಿ ಕೊಳವೆಬಾವಿ ಕೊರೆಸಿ, ಪಂಪ್ ಮೋಟಾರ್ ಅಳವಡಿಸಿ ನೀರಿಗೆ ವ್ಯವಸ್ಥೆಗೊಳಿಸಿಕೊಡಬೇಕು ಎಂದು ಕೋರಿದರು. ಅಲ್ಲದೆ, ಸೀತಕಲ್ಲು ಗ್ರಾಮದಲ್ಲಿ ಕೊಳವೆಬಾವಿ ಕೊರೆದಿದ್ದು, ಮೋಟರ್-ಪಂಪ್ ಅಳವಡಿಸಿಲ್ಲ ಎಂದು ಸಭೆಯ ಗಮನಕ್ಕೆ ತಂದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ಉಗ್ರಯ್ಯನವರು ಮಾತನಾಡಿ, ತಾಲ್ಲೂಕಿನ ಮಲ್ಲಾಘಟ್ಟ ಕೆರೆಯಲ್ಲಿ ಸಾಕಷ್ಟು ನೀರಿನ ಸಂಗ್ರಹಣೆಯಿದ್ದು, ಇದರಿಂದ ರಾಜೀವ್ ಗಾಂಧಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಡಿ 40 ಗ್ರಾಮಕ್ಕೆ ಗ್ರಾಮ ಮುಖಾಂತರ ತಾಲ್ಲೂಕಿನ ಆನೇಕೆರೆ, ಬಾಣಸಂದ್ರ, ಲೋಕಮ್ಮನಹಳ್ಳಿ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ ಸುಮಾರು 40 ಹಳ್ಳಿಗಳಿಗೆ ಶಾಶ್ವತ ನೀರಿನ ವ್ಯವಸ್ಥೆ ಕಲ್ಪಿಸಬಹುದಾಗಿದೆ ಎಂದು ತಿಳಿಸಿದರಲ್ಲದೇ, ಬೆಸ್ತರಹಳ್ಳಿ, ಆನೇಕೆರೆ ಪಾಳ್ಯ, ಹೆಸರಟ್ಟಿ ಗ್ರಾಮಗಳಲ್ಲಿಗೆ ತುರ್ತಾಗಿ ಕೊಳವೆಬಾವಿ ಕೊರೆಸಲು ವ್ಯವಸ್ಥೆಗೊಳಿಸಿಕೊಡಬೇಕು ಎಂದು ಕೋರಿದರು.

ಜಿ.ಪಂ. ಮಾನ್ಯ ಸದಸ್ಯರಾದ ಶ್ರೀಮತಿ ವಿಶಾಲಾಕ್ಷಿ ಪ್ರಕಾಶಗೌಡ ರವರು ಮಾತನಾಡಿ, ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ಕೊರೆಸಿರುವ ಕೊಳವೆಬಾವಿಗಳಿಗೆ ಪಂಪ್-ಮೋಟರ್ ಅಳವಡಿಸಿ ಸರ್ವೀಸ್

ಕೊಡಿಸಿಕೊಡಬೇಕು ಎಂದು ಕೋರಿದರು. ಹಾಗೂ ಶ್ರೀಮತಿ ಸುಕನ್ಯ ರವರು ಮಾತನಾಡಿ ತಮ್ಮ ಕ್ಷೇತ್ರದ ಇಟಕದಿಬ್ಬನಹಳ್ಳಿ ಸೇರಿದಂತೆ ಅನೇಕ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದ್ದು ಶೀಘ್ರವಾಗಿ ಪರಿಹರಿಸಲು ಕೋರಿದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು ಮಾತನಾಡಿ, ಇತ್ತೀಚೆಗೆ ಶಾಸಕರಾಗಿ ಆಯ್ಕೆಯಾದ ಶ್ರೀ ಸುಧಾಕರ್ ಲಾಲ್ ರವರಿಗೆ ಎಲ್ಲಾ ಜಿಲ್ಲಾ ಪಂಚಾಯತ್ ಸದಸ್ಯರ ಪರವಾಗಿ ಅಭಿನಂದನೆ ಸಲ್ಲಿಸಿದರು. ಚುನಾವಣಾ ನೀತಿ ಸಂಹಿತೆ ಇದ್ದಕಾರಣ ಹಾಗೂ ನೀರಿನ ಸಮಸ್ಯೆಯನ್ನು ಬಗೆಹರಿಸಲಾಗಿಲ್ಲ ಜೊತೆಗೆ ಪ್ರಸ್ತುತ ಅಗತ್ಯ ಪ್ರಮಾಣದಲ್ಲಿ ಮಳೆ ಬಾರದೆ ನೀರಿಗೆ ತೊಂದರೆಯಾಗಿದೆ ಎಂದು ತಿಳಿಸಿ, ಕೆರೆಯಾಗಲಹಳ್ಳಿಯಲ್ಲಿ ಸಾಕಷ್ಟು ನೀರಿದ್ದರೂ ಸಹ ಫ್ಲೋರೈಡ್ ಯುಕ್ತವಾಗಿರುವುದರಿಂದ ಬಳಕೆಗೆ ಯೋಗ್ಯವಾಗಿರುವುದಿಲ್ಲ ಎಂದು ತಿಳಿಸಿ, ಈ ಸಂಬಂಧ, ಗದಗ ಜಿಲ್ಲೆಯ ಮಾದರಿಯಲ್ಲಿ ಮೂರು ತಾಲ್ಲೂಕುಗಳಿಗೆ (ಪಾವಗಡ, ಶಿರಾ, ಮಧುಗಿರಿ) ಡೀ-ಫ್ಲೋರೈಡ್ ಪ್ಲಾಂಟ್ ಗಳನ್ನು ಹಾಕಿಸಿ ATM ಮಾದರಿ ಮಾಡಿಸಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಿಕೊಡಬೇಕು ಎಂದು ಕೋರಿದರು. ಮುಂದುವರಿದು ಮಾತನಾಡುತ್ತಾ, ಕ್ರಿಯಾ ಯೋಜನೆಯನ್ವಯ 13ನೇ ಹಣಕಾಸು ಯೋಜನೆಗೆ ನಿಗಧಿಪಡಿಸಿರುವ ಅನುದಾನ ಸಾಕಾಗುವುದಿಲ್ಲ; ಐ.ಎಂ.ಐ.ಎಸ್. ಅಡಿ ಕ್ಷೇತ್ರವಾರು ಪಟ್ಟಿ ಪಡೆದು ಕ್ರಿಯಾಯೋಜನೆ ಮಾಡಬೇಕೆಂದು ತಿಳಿಸಿದ್ದರೂ ಸಹ ಯಾರೊಬ್ಬರೂ ಜಿಲ್ಲಾ ಪಂಚಾಯತ್ ಸದಸ್ಯರುಗಳ ಗಮನಕ್ಕೆ ತಂದಿರುವುದಿಲ್ಲ, ಈ ಬಗ್ಗೆ ಗಮನಹರಿಸಿ ಎಂದು ತಿಳಿಸಿದರು. ನಂತರ ಮಾತನಾಡಿ, ಅರಿಯಜ್ಜನಹಳ್ಳಿ ಗ್ರಾಮದಲ್ಲಿ 4 ಕೊಳವೆಬಾವಿಗಳನ್ನು ಕೊರೆಸಿದ್ದರೂ ನೀರಿಲ್ಲದೆ ಪಂಚಾಯಿತಿಯಿಂದ ಟ್ಯಾಂಕರ್ ನಿಂದ ನೀರು ಒದಗಿಸಬೇಕಾಗಿದೆ, ಆದರೆ ಕಳೆದ ವರ್ಷ ಪೂರೈಕೆ ಮಾಡಿದ ನೀರಿನ ಬಾಬ್ತು ಸಂಬಂಧಪಟ್ಟವರಿಗೆ ಹಣ ಪಾವತಿಸಿಲ್ಲದ ಕಾರಣ ಅವರು ನೀರು ಸರಬರಾಜು ಮಾಡುತ್ತಿಲ್ಲ. ಈ ಸಂಬಂಧ ಪ್ರತಿ ತಾಲ್ಲೂಕಿಗೆ ರೂ. 2-3 ಲಕ್ಷ ಹಣ ನೀಡಿದ್ದರೂ ಸಹ ಅದನ್ನು ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡಿರುವುದಿಲ್ಲ; 13 ನೇ ಹಣಕಾಸು ಯೋಜನೆಯ ಮಾರ್ಗಸೂಚಿಯನ್ನು ಬದಲಿಸಿರುವುದರಿಂದ ಗ್ರಾಮ ಪಂಚಾಯಿತಿಗಳ ಕೈಕಟ್ಟಿ ಹಾಕಿದಂತಾಗಿದೆ; ಆದುದರಿಂದ ಸದರಿ ಯೋಜನೆಯ ಮಾರ್ಗಸೂಚಿಯ ಬದಲಾವಣೆಗೆ ಕೋರಿ( ಈ ಮೊದಲಿದ್ದಂತೆ) ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕು ಎಂದು ಕೋರಿದರು. ಮುಂದುವರಿದು ಮಾತನಾಡುತ್ತಾ, ಕರೆತಿಮ್ಮನಹಳ್ಳಿ, ಪಟ್ಟನಾಯಕನಹಳ್ಳಿ, ಬಂದಕುಂಟೆ-ಗೊಲ್ಲರಹಟ್ಟಿ ಬಡವನಹಳ್ಳಿ ಗ್ರಾಮಗಳಲ್ಲಿನ ಕೊಳವೆಬಾವಿಗಳು ನೀರೆತ್ತುತ್ತಿಲ್ಲ; ಕಾಮಗೊಂಡನಹಳ್ಳಿ ಗ್ರಾಮಕ್ಕೆ 2011-12ನೇ ಸಾಲಿನಲ್ಲಿ ಮಂಜೂರಾಗಿರುವ ಮೇಲುತೊಟ್ಟಿ ಕಾಮಗಾರಿ ಈ ವರೆಗೆ ಪೂರ್ಣಗೊಂಡಿರುವುದಿಲ್ಲ; ಸೀಗರಹಳ್ಳಿಯಲ್ಲಿ ನೀರು ವಿತರಕನ ನಿರ್ಲಕ್ಷ್ಯದಿಂದಾಗಿ ನೀರಿಗಾಗಿ ಡೈರೆಕ್ಟ್ ಪೈಪ್ ಲೈನ್ ಗೆ ಪೈಪ್ ಹಾಕಿಕೊಂಡಿರುತ್ತಾರೆ; ಕೊಳವೆಬಾವಿಗಳಿಗೆ ಬಿಟ್ಟಿರುವ ಪಂಪು ಮೋಟರ್ ಗಳು ಕಾಣೆಯಾಗಿವೆ ಎಂದು ಇತ್ತೀಚೆಗೆ ಪತ್ರಿಕೆಗಳಲ್ಲಿ ಪ್ರಕಟಣೆಯಾಗುತ್ತಿದೆ. ಇದರಿಂದಾಗಿ ಈ ಬಗ್ಗೆ ಜಿಲ್ಲಾ ಪಂಚಾಯತ್ ಗೆ ಕೆಟ್ಟ ಹೆಸರು ಬರುತ್ತಿದೆ. ತಾಲ್ಲೂಕು ಮಟ್ಟದಲ್ಲಿ ಪ್ರಗತಿ, ಕೆ.ಡಿ.ಪಿ. ಸಭೆಗಳಲ್ಲಿ ಚರ್ಚಿಸಿ ಸ್ಥಳೀಯವಾಗಿ ಈರೀತಿಯ ಸಮಸ್ಯೆಗಳನ್ನು ಆದಷ್ಟು ತುರ್ತಾಗಿ ಬಗೆಹರಿಸತಕ್ಕದ್ದು ಎಂದು ಅಧಿಕಾರಿಗಳಿಗೆ ಸಲಹೆ ನೀಡಿದರು. ಕೊಳವೆಬಾವಿಗಳನ್ನು ಕೊರೆದ ನಂತರ ಮೋಟರ್ ಬಿಟ್ಟು ಕೂಡಲೇ ನಿರ್ವಹಣೆಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ವಹಿಸಿಕೊಡಬೇಕು, ಹಾಗೂ ಪಂಚಾಯಿತಿಯವರು ಅದನ್ನು ಉಸ್ತುವಾರಿ ಮಾಡಬೇಕು ಎಂದು ತಿಳಿಸಿ, ಈ ಎಲ್ಲ ಸಮಸ್ಯೆಗಳನ್ನು ತ್ವರಿತವಾಗಿ ಬಗೆಹರಿಸಿಕೊಡಬೇಕು ಎಂದು ಕೋರಿದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀಮತಿ ಮಂಗಳಗೌರಮ್ಮನವರು ಮಾತನಾಡಿ, ದಂಡಿನಶಿವರ ಹೋಬಳಿ ಕೋಡಿಪಾಳ್ಯ, ವೀರಸಾಗರ ಗ್ರಾಮಗಳಲ್ಲಿ ನೀರಿಲ್ಲ, ಇರುವ ನೀರನ್ನು ಶುಚಿಗೊಳಿಸಿ ಸರಬರಾಜು ಮಾಡುತ್ತಿಲ್ಲ ಈ ಬಗ್ಗೆ ಪಂಚಾಯಿತಿ ವತಿಯಿಂದ ಸಿಸ್ಟನ್ ಗಳನ್ನು ಶುಚಿಗೊಳಿಸಿಕೊಡುವ ಬಗ್ಗೆ ಕಾರ್ಯನಿರ್ವಾಹಕ ಅಧಿಕಾರಿಗಳು ಗಮನ ಹರಿಸತಕ್ಕದ್ದು ಎಂದು ಕೋರಿದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀಮತಿ ಲತಾ ಕೊಂಡಜ್ಜಿವಿಶ್ವನಾಥ್ ರವರು ಮಾತನಾಡಿ, ತಿಪಟೂರು ತಾಲ್ಲೂಕು ಗುಂಗುರುಮೆಳೆ ಗ್ರಾಮದಲ್ಲಿ ಮಳೆಯ ಅಭಾವದಿಂದಾಗಿ 2000-3000 ತೆಂಗಿನ ಗಿಡಗಳಿರುವ ತೋಟಗಳು ಹಾಳಾಗುತ್ತಿವೆ; ವಿದ್ಯುತ್ ಸಂಪರ್ಕ ಸರಿಯಿಲ್ಲದೆ ನೀರು ಹರಿಸಲಾಗುತ್ತಿಲ್ಲ. ಗ್ರಾಮ ಪಂಚಾಯಿತಿಯಲ್ಲಿ ಹಣವಿಲ್ಲವೆಂದು ಹೇಳಿ ಯಾವುದೇ ನೀರಿನ ಅನುಕೂಲ ಮಾಡಿಕೊಟ್ಟಿರುವುದಿಲ್ಲ ತಿಪಟೂರಿನಿಂದ ನೀರು ತಂದು ಹಬ್ಬ ಮಾಡಿರುತ್ತಾರೆ ಎಂದು ತಿಳಿಸಿ, ಈ ಬಗ್ಗೆ ಗಮನಹರಿಸಿ ತ್ವರಿತವಾಗಿ ಸಮಸ್ಯೆ ಬಗೆಹರಿಸಿಕೊಡಬೇಕು ಎಂದು ಕೋರಿದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ಪಂಚಾಕ್ಷರಿಯವರು ಮಾತನಾಡಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಗಳು ಸರಿಯಾಗಿ ಸ್ಪಂದಿಸದೇ ನೀರಿಗೆ ತೊಂದರೆಯಾಗಿದೆ, 800 ಅಡಿ ಆಳದವರೆಗೆ ಕೊಳವೆಬಾವಿ ಕೊರೆದು ಕೇವಲ 400 ಅಡಿ ಆಳದವರೆಗೆ ಪೈಪ್ ಇಳಿಸಿದರೆ ಪ್ರಯೋಜನವಾಗುವುದಿಲ್ಲ, OHT ಗಳು ಪೂರ್ಣಗೊಂಡಿಲ್ಲ. ಕೆ.ಇ.ಬಿ. ಯಿಂದ ವಿದ್ಯುತ್ ಸಂಪರ್ಕ ಕೊಡುತ್ತಿಲ್ಲ. 63 ಕೆ.ವಿ. ಸುಟ್ಟರೆ 100 ಕೆ.ವಿ. ಗೆ ಬದಲಿಸಬೇಕು ಆದರೆ 63 ಕೆ.ವಿ.ನೇ ಅಳವಡಿಸಿರುತ್ತಾರೆ. ಅದು ಪುನ: 3-4 ದಿನದಲ್ಲಿ ಸುಡುತ್ತವೆ. OHT ಗಳ ಪೈಪ್ ಲೈನ್ ಗುಣಮಟ್ಟ ಇಲ್ಲ ಎಲ್ಲೆಂದರಲ್ಲಿ ಪೈಪ್ ಹೊಡೆಯುತ್ತವೆ ಎಂದು ತಿಳಿಸಿದರು ಈ ಬಗ್ಗೆ ಅರ್ಥಪೂರ್ಣ ಚರ್ಚೆಯಾಗಬೇಕು ಎಂದು ಸಭೆಯ ಗಮನಕ್ಕೆ ತಂದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀಮತಿ ನಾಗಮಣಿಯವರು ಮಾತನಾಡಿ, ತುರುವೇಕೆರೆ ತಾಲ್ಲೂಕಿನಲ್ಲಿ ಉತ್ತಮ ಗುಣಮಟ್ಟದ ಪೈಪ್ ಲೈನ್ ಮತ್ತು ಮೇಲುತೊಟ್ಟಿ ಕಾಮಗಾರಿ ನಿರ್ವಹಿಸಿ ನೀರಿನ ಸಮಸ್ಯೆ ಬಗೆಹರಿಸಬೇಕು ಎಂದು ಕೋರಿದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ತ್ರಿಯಂಬಕರವರು ಮಾತನಾಡಿ, ಶಾಲೆಗಳಿಗೆ ಫಿಲ್ಟರ್ ನೀರು ಕೊಡಲು ತಾತ್ಕಾಲಿಕ ವ್ಯವಸ್ಥೆ ಮಾಡಬೇಕು; ಅರಣ್ಯ ಇಲಾಖೆ ವತಿಯಿಂದ ಆಲ ಮತ್ತು ಅರಳಿ ಮರಗಳ ಅಭಿವೃದ್ಧಿಗೆ ಒತ್ತುನೀಡಬೇಕು; ಮರಗಳನ್ನು ದತ್ತುಸ್ವೀಕಾರ ಮಾಡಿ ಪೋಷಣೆ ಮಾಡಬೇಕು ಪರಿಸರ ರಕ್ಷಿಸಿದರೆ ಮುಂದೆ ಸಮಸ್ಯೆ ಬಗೆಹರಿಯುತ್ತದೆ; ತಾತ್ಕಾಲಿಕವಾಗಿ ಕೊಳವೆಬಾವಿಗಳಿಗೆ ಪಂಪ್ ಹಾಕಿ ಸಿಸ್ಟನ್ ಅಳವಡಿಸಿ ನೀರು ಹರಿಸಬೇಕು; ರಸ್ತೆ ಬದಿಗಳಲ್ಲಿ ಮರಗಳನ್ನು ಬೆಳೆಸದಿದ್ದರೆ ಹಾಗೂ ಬೆಳೆದಿರುವ ಮರಗಳನ್ನು ರಕ್ಷಿಸದಿದ್ದರೆ ಮುಂದಿನ ದಿನಗಳಲ್ಲಿ ಮಳೆ ಅಭಾವ ಬರ ಸಮಸ್ಯೆ ಯಾವಾಗಲೂ ಇದ್ದು ಜೀವನ ಕಷ್ಟಸಾಧ್ಯವಾಗುತ್ತದೆ ಎಂದು ಸಭೆಗೆ ತಿಳಿಸಿದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀಮತಿ ದಾಕ್ಷಾಯಿಣಿಯವರು ಮಾತನಾಡಿ, ಕೆಲವೊಂದು ಗ್ರಾಮಗಳಲ್ಲಿ ಕೊಳವೆಬಾವಿ ಕೊರೆದು ಆರು ತಿಂಗಳಾದರೂ ನೀರು ಹೊರಬಿದ್ದಿಲ್ಲ, ಆದುದರಿಂದ ಜಿಲ್ಲಾ ಪಂಚಾಯತ್ ವತಿಯಿಂದ ಕೊಳವೆಬಾವಿ ಕೊರೆಸಿದರೆ ಒಂದು ತಿಂಗಳ ಒಳಗೆ ನೀರು ಹರಿಸಲು ವ್ಯವಸ್ಥೆಗೊಳಿಸಬೇಕು ಇಲ್ಲದಿದ್ದರೆ ಬೋರ್ ವೆಲ್ ನಲ್ಲಿ ನೀರೆ ಇರುವುದಿಲ್ಲ. ತಕ್ಷಣ ನೀರು ಹರಿಸಿ ಸಮಸ್ಯೆ ಬಗೆಹರಿಸಿ ಎಂದು ಕೋರಿದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ಚಂದ್ರಶೇಖರಬಾಬು ರವರು ಮಾತನಾಡಿ, ಸಕಾಲದಲ್ಲಿ ಮಳೆ ಇಲ್ಲದ ಕಾರಣ ಪ್ರತಿದಿನ ಕೊಳವೆಬಾವಿಗಳಲ್ಲಿನ ಅಂತರ್ಜಲಮಟ್ಟ ಸುಮಾರು 4-5 ಅಡಿಯಷ್ಟು ಕೆಳಕ್ಕೆ ಇಳಿಯುತ್ತದೆ; ಈ ಸಂಬಂಧ ಪಂಚಾಯಿತಿವತಿಯಿಂದ 1-2 ಲೆಂತ್ ಪೈಪ್ ಇಳಿಸಿದರೆ ನೀರಿಗೆ ಅನುಕೂಲವಾಗುತ್ತದೆ; ಕೆ.ಇ.ಬಿ. ಸಮಸ್ಯೆಯಿಂದ ಮೋಟರ್ ಸುಡುತ್ತಿರುತ್ತವೆ. ಮೇಲೆತ್ತಲು ಸಾಕಷ್ಟು ಹಣ ನಷ್ಟವಾಗುತ್ತದೆ ಪಂಚಾಯಿತಿಗಳಲ್ಲಿ ನೀರಿನ ಕರ ವಸೂಲಿ ಸಮಸ್ಯೆ ಇದೆ. ಈ ಬಗ್ಗೆ ಪಿ.ಡಿ.ಓ.ಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿ ಎಲ್ಲಾ ಪಂಚಾಯಿತಿಗಳಲ್ಲಿಯೂ ಕಂದಾಯ ವಸೂಲಿ ಮಾಡಬೇಕು; ಹಾಗೂ ಕೊಳವೆಬಾವಿಗಳಿಗೆ ಒಳ್ಳೆಯ ಗುಣಮಟ್ಟದ double cabling texmo motor ಅಳವಡಿಸಬೇಕು, ಇಲ್ಲವಾದಲ್ಲಿ ಪಂಪು ಮೋಟಾರ್ ಸುಡುತ್ತವೆ. ಹೂಡಿದ ಬಂಡವಾಳ ಲಕ್ಷಾಂತರ ರೂ. ವ್ಯರ್ಥವಾಗುತ್ತದೆ; ಆದುದರಿಂದ ಕೂಡಲೇ ಕ್ರಮ ಕೈಗೊಂಡು ಪ್ರತಿ ಪಂಚಾಯಿತಿಗೆ ಕೊಳವೆಬಾವಿಗಳ ನಿರ್ವಹಣೆಗೆಂದೇ ಇಂತಿಷ್ಟು ಎಂದು ಹಣ ನೀಡದಿದ್ದರೆ ಪ್ರಯೋಜನವಾಗುವುದಿಲ್ಲ; ಪಂಚಾಯಿತಿಯವರು ಒಂದು ಮನೆಗೆ ದಿನಕ್ಕೆ ಮೂರು ಬಿಂದಿಗೆ ನೀರು ಕೊಡುತ್ತಿದ್ದಾರೆ; ಕೊಚ್ಚೇನಹಳ್ಳಿ ಗ್ರಾಮದಲ್ಲಿ 4 ಕೊಳವೆಬಾವಿಗಳನ್ನು ಕೊರೆದರೂ ನೀರು ಸಿಕ್ಕಿಲ್ಲ, ಈ ಸಂಬಂಧ ಚೇಳೂರು ವ್ಯಾಪ್ತಿಯ ಎಣ್ಣೆಗೆರೆಯಿಂದ ಎರಡು ಪೈಪ್ ಲೈನ್ ಗಳಿಂದ ನೀರು ನೀಡಲಾಗುತ್ತಿದೆ. ಕೊಳವೆಬಾವಿಗಳಿಗೆ ಸಂಪರ್ಕ ಕಲ್ಪಿಸಲು ಕೆ.ಇ.ಬಿ.ಯವರು ಸ್ಪಂದಿಸುವುದಿಲ್ಲ, ಆದ್ದರಿಂದ ಹೆಚ್ಚುವರಿ ಟಿ.ಸಿ. ಅಳವಡಿಸಬೇಕು ಪಂಚಾಯಿತಿಗಳು ನೀರು ನಿರ್ವಹಣೆಗೆ ಹಣನೀಡಬೇಕು. ಕೆ.ಇ.ಬಿ. ಯವರು ನಿಯಮಿತವಾಗಿ ವಿದ್ಯುತ್ ಸರಬರಾಜು ಮಾಡಿದರೆ ರೈತರ ಅಡಿಕೆ ಗಿಡಗಳಿಗೆ ಹಾಗೂ ಜನ-ಜಾನುವಾರುಗಳಿಗೆ ಕುಡಿಯುವ ನೀರು ಪೂರೈಸಲು ಅನುಕೂಲವಾಗುತ್ತದೆ ಎಂದು ತಿಳಿಸಿದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀಮತಿ ಸಿ.ಆರ್.ಮಂಜುಳರವರು ಮಾತನಾಡಿ, ವೀರಾಪುರ, ದೊಡ್ಡೇನಹಳ್ಳಿ, ಗಂಗೋನಹಳ್ಳಿ, ಚಿಕ್ಕಮಾಲೂರು ಗ್ರಾಮಗಳಲ್ಲಿನ ನೀರಿನ ತೊಂದರೆಯನ್ನು ಬಗೆಹರಿಸಿಕೊಡುವಂತೆ ಕೋರಿದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ವೈ.ಹೆಚ್.ಹುಚ್ಚಯ್ಯನವರು ಮಾತನಾಡಿ, ಸ್ವಲ್ಪ ಮಳೆ ಬಂದು ತಲೆ ನೆನೆದಿದೆ ಕಾಲು ತಣ್ಣಗಾಗಿಲ್ಲ ಸಮಸ್ಯೆ ಇದೆ. ನೀರಿನ ವ್ಯವಸ್ಥೆ ನಿರ್ವಹಣೆ ಮಾಡುವಲ್ಲಿ ಆಡಳಿತ ವ್ಯವಸ್ಥೆ ವಿಫಲವಾಗಿದೆ; ನೀರಿಲ್ಲದ ಕಡೆಗಳಲ್ಲಿ ಸಾಕಷ್ಟು ದೂರದಿಂದ ಸೈಕಲ್ ಗಳಲ್ಲಿ ಕೊಡಹೊತ್ತು ನೀರು ತರುತ್ತಾರೆ; ನೀರು ಇರುವೆಡೆ ಮಿತಬಳಕೆ ಮಾಡುವ ಸೌಜನ್ಯ ಸಾರ್ವಜನಿಕರು/ ನೌಕರರಿಗಿಲ್ಲ; ಇದರಿಂದ ವಿದ್ಯುತ್ ಸಹ ವ್ಯರ್ಥವಾಗುತ್ತದೆ, ನೀರಿಲ್ಲದಿದ್ದರೆ ಜನ ಗ್ರಾ.ಪಂ.ನಲ್ಲಿ ಕೇಳುವುದಿಲ್ಲ ಜಿಲ್ಲಾ ಪಂಚಾಯಿತಿ ಸದಸ್ಯರಾದ ನಮ್ಮನ್ನು ಕೇಳುತ್ತಾರೆ; ಆದ್ದರಿಂದ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರತಿ ಗ್ರಾಮ ಪಂಚಾಯಿತಿಯು ನೀರು ನಿರ್ವಹಣೆಯ ಕುರಿತು ನಿಗಾವಹಿಸಬೇಕು; ಸೋಮೆದೇವರಪಾಳ್ಯದಲ್ಲಿ ಕಾರ್ಯಪಡೆ ಅಡಿ ಒಂದು ಕೊಳವೆಬಾವಿಯನ್ನು ಕೊರೆಯಲಾಗಿರುತ್ತದೆ; ಅದಕ್ಕೂ ಮೊದಲು Contengency ಅಡಿ ಕೂಡ ಒಂದು ಕೊಳವೆಬಾವಿ ಕೊರೆಯಲಾಗಿರುತ್ತದೆ; ಒಂದೇ ಕಡೆ ಎರಡು ಕೊಳವೆಬಾವಿ ಕೊರೆಯಬಾರದು ಎಂಬ ಕನಿಷ್ಟ ಅರಿವು ಅಧಿಕಾರಿಗಳಿಗಿಲ್ಲ ಈ ಎರಡು ಕೊಳವೆಬಾವಿಗಳಿಗೆ ಮೋಟಾರ್ ಅಳವಡಿಸಿಲ್ಲ ನೀರಿನ ಸಮಸ್ಯೆ ಹಾಗೆ ಇದೆ. ತಾವರೆಕೆರೆ, ಬೊಮ್ಮನಹಳ್ಳಿ ಪಂಚಾಯತಿಗಳಲ್ಲಿ ಕೊಳವೆಬಾವಿಗಳಿಗೆ ಮೋಟಾರು ಅಳವಡಿಸಿ ನಾಲ್ಕು ತಿಂಗಳುಗಳು ಕಳೆದರೂ ಸಹ ಈ ವರೆಗೆ ಹಣ ನೀಡಿರುವುದಿಲ್ಲ; ಎಡೇಹಳ್ಳಿಯಲ್ಲಿಯೂ ಸಹ ನೀರಿನ ಸಮಸ್ಯೆ ಇರುತ್ತದೆ; ಸಾರ್ವಜನಿಕರ ಸ್ವತ್ತು ಸರ್ಕಾರದ ಸ್ವತ್ತು ಎನ್ನುವ ಮನೋಭಾವದಿಂದ ಅಧಿಕಾರಿಗಳು ಕೆಲಸ ಮಾಡಬೇಕು; ಕಾರ್ಯಾನಿರ್ವಾಹಕ ಅಧಿಕಾರಿಗಳು, ಪಿ.ಡಿ.ಓ.ಗಳು ಮತ್ತು ಕಾರ್ಯದರ್ಶಿಗಳು, ತಮ್ಮ ಕಾರ್ಯ ವ್ಯಾಪ್ತಿಯಲ್ಲಿ ಸಮರ್ಪಕ ಉಸ್ತುವಾರಿ ಮಾಡಿ ಸರ್ಕಾರದ

ಯೋಜನೆಗಳಿಗೆ ಬಿಡುಗಡೆಯಾಗುವ ಅನುದಾನ ವ್ಯವಸ್ಥಿತ ರೀತಿಯಲ್ಲಿ ವಿನಿಯೋಗವಾಗುವಂತೆ ನೋಡಿಕೊಳ್ಳಬೇಕು; ಸೀಗೆಪಾಳ್ಯ(ಜೋಡಿಹೊಸಹಳ್ಳಿ ಪಂಚಾಯತಿ) ಕುಂಬಯ್ಯನ ಪಾಳ್ಯ (ಚೌಡನಕುಪ್ಪೆ ಪಂಚಾಯತಿ) ಎಡೇಹಳ್ಳಿ ಹರಿಜನ ಕಾಲೋನಿ (ಜೋಡಿ ಹೊಸಹಳ್ಳಿ ಪಂಚಾಯತಿ) ಗ್ರಾಮಗಳಲ್ಲಿ ಕೊಳವೆಬಾವಿಗಳನ್ನು ಕೊರೆಸಬೇಕು ಎಂದು ಸಭೆಗೆ ವಿವರಿಸಿದರು. ಆರ್.ಸಿ.ಆಂಜನಪ್ಪನವರು ತಿಳಿಸಿದ ಹಾಗೆ ಶಾಲೆ ಮತ್ತು ಅಂಗನವಾಡಿಗಳಿಗೆ ಶುದ್ಧ ನೀರನ್ನು ಕೊಡಲು ಫಿಲ್ಟರ್ ವ್ಯವಸ್ಥೆ ಮಾಡಬೇಕು ಎಂದು ಸಭೆ ಗಮನ ಸೆಳೆದರು. ಸಮಸ್ಯೆ ಬಗ್ಗೆ ಚರ್ಚಿಸೋಣ ಎಂದರೆ, AEE ಗಳು ಪೋನ್ ಗೆ ಸಿಗುವುದಿಲ್ಲ. ಶಾಖಾಧಿಕಾರಿಗಳು ಸ್ಪಂಧಿಸುತ್ತಿಲ್ಲ ಎಂದು ತಿಳಿಸಿದರು.

ಜಿ.ಪಂ.ಮಾನ್ಯ ಸದಸ್ಯರಾದ ಬಡೀರಣ್ಣನವರು ಮಾತನಾಡಿ, ಕುಡಿಯುವ ನೀರಿನ ಸಮಸ್ಯೆ ಕುರಿತು ಮಾನ್ಯ ಜಿಲ್ಲಾಧಿಕಾರಿಯವರನ್ನು ಸಭೆಗೆ ಕರೆಸಿ ಹಿಂದಿನ ಕ್ರಿಯಯೋಜನೆ ಮೇರೆಗೆ ಈವರೆಗೆ ಎಷ್ಟು ಕೊಳವೆಬಾವಿಗಳು ಲೋಕಾರ್ಪಣೆಗೊಂಡಿವೆ ಹಾಗೂ ವಿಫಲವಾದ ಕೊಳವೆಬಾವಿಗಳ ಪೈಕಿ ಎಷ್ಟು ಪಂಪು ಮೋಟಾರುಗಳನ್ನು ಬದಲೀ ಉಪಯೋಗ ಮಾಡಲಾಗಿದೆ (Replacement) ಎಂಬ ಬಗ್ಗೆ ಸ್ಪಷ್ಟ ಮಾಹಿತಿ ಒದಗಿಸಬೇಕು; ಇತ್ತೀಚಿನ ಸುತ್ತೋಲೆಯಲ್ಲಿ 13ನೇ ಹಣಕಾಸು ಯೋಜನೆಯ ಅನುದಾನವನ್ನು ಕುಡಿಯುವ ನೀರಿಗೆ ಬಳಸಬಾರದು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ನಿರ್ದೇಶಕರು, ಮಾರ್ಗಸೂಚಿಯ ಕಂಡಿಕೆ 7ರಲ್ಲಿ ಸೂಚಿಸಿದ್ದು, ಪುನ: ಕಂಡಿಕೆ 21ರಲ್ಲಿ ನಿಯಮ 58ರ ಪ್ರಕಾರ ಎಲ್ಲಾ ಕಾಮಗಾರಿಗಳನ್ನು ನಿರ್ವಹಿಸಬಹುದು ಎಂದು ಹೇಳಿದ್ದಾರೆ; ಈ ರೀತಿಯ ಗೊಂದಲ ಬೇಡ, ನಿಯಮ 58ರ ಪ್ರಕಾರ ಗ್ರಾಮ ಪಂಚಾಯತಿಯು ಅಭಿವೃದ್ಧಿ ದೃಷ್ಟಿಯಿಂದ ಎಲ್ಲಾ ಕಾಮಗಾರಿಗಳನ್ನು ನಿರ್ವಹಿಸಬಹುದು ಎಂದು ಭಾವಿಸಿ ಅದರಂತೆ ನಿಯಮ 58ನ್ನು ಅನುಷ್ಠಾನಕ್ಕೆ ತರುವ ಕುರಿತು ನಿರ್ಣಯ ಕೈಗೊಂಡು ಸರ್ಕಾರಕ್ಕೆ ಸಲ್ಲಿಸಬೇಕು; ಡಿ ಪ್ಲೋರೈಡ್ ಪ್ಲಾಂಟ್ ಗಳನ್ನು ಅಳವಡಿಸಲು ಪ್ರತಿ ಸದಸ್ಯರು 5 ಗ್ರಾಮಗಳ ಪಟ್ಟಿಯನ್ನು ಕೊಡುತ್ತೇವೆ; ಅದರಂತೆ ಅನುಷ್ಠಾನಗೊಳಿಸಿ ಆಗಸ್ಟ್ 15ಕ್ಕೆ ಶುದ್ಧ ಕುಡಿಯುವ ನೀರು ಕೊಡುವ ಕಾರ್ಯಕ್ರಮವನ್ನು ಮಾಡೋಣ; ಇದಕ್ಕೆ ಎಲ್ಲರೂ ಸಹಕಾರ ನೀಡಬೇಕು ಎಂದು ಕೋರಿದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ಎ.ಬಿ.ಜಗದೀಶ್ ರವರು ಮಾತನಾಡಿ, ರಾಜೀವ್ ಗಾಂಧಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಡಿ ದಬ್ಬೇಘಟ್ಟ ಮತ್ತು ಕಣತ್ತೂರು ಗ್ರಾಮಗಳಿಗೆ ಹೇಮಾವತಿ ನೀರು ಹರಿಸಲು ಕಾಮಗಾರಿ ಮಂಜೂರು ಮಾಡಿ ಎರಡು ವರ್ಷಗಳು ಕಳೆದರೂ ಈವರೆಗೆ ಕಾಮಗಾರಿ ಪ್ರಾರಂಭಗೊಂಡಿರುವುದಿಲ್ಲ ಎಂದು ಸಭೆಯ ಗಮನಕ್ಕೆ ತಂದರು; ಮುಂದುವರೆದು ಕೆ.ಮಾವಿನಹಳ್ಳಿ ಗ್ರಾಮದಲ್ಲಿ ಒಂದು ಮೇಲುತೊಟ್ಟಿ ಮಂಜೂರಾಗಿದ್ದು, ಕಾಮಗಾರಿ ಪ್ರಾರಂಭವಾಗಿರುವುದಿಲ್ಲ; ಹಾಗೂ ಕೊಳವೆಬಾವಿಗೆ ಅಳವಡಿಸಲಾದ ಟಿ.ಸಿ.ಯು ಮಾರನೇ ದಿನವೇ ಸುಟ್ಟುಹೋಗಿರುತ್ತದೆ ಎಂದು ತಿಳಿಸಿ, ಇದನ್ನು ಕೂಡಲೇ ದುರಸ್ತಿ ಗೊಳಿಸಿಕೊಡಬೇಕೆಂದು ಸಭೆಯ ಗಮನಕ್ಕೆ ತಂದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀಮತಿ ಸುಮಿತ್ರಮ್ಮನವರು ಮಾತನಾಡಿ, ಸಂತೆಮಾವತ್ತೂರು, ಹನುಮೇಗೌಡನಪಾಳ್ಯ, ಹಿತ್ತಲಹಳ್ಳಿ, ಹನುಮಂತನಗರ, ಟಿ.ಹೊಸಹಳ್ಳಿ, ವಾಜರಪಾಳ್ಯ, ಗಿರಿನಗರ ಎಸ್.ಸಿ.ಕಾಲೋನಿ, ಗವಿಮಠ (ಪ್ರೌಢಶಾಲೆ) ಗ್ರಾಮಗಳಲ್ಲಿ ನೀರಿಗೆ ಬಹಳಷ್ಟು ತೊಂದರೆಯಿದ್ದು, ಈ ಸಂಬಂಧ ಕೊಳವೆಬಾವಿಗಳನ್ನು ಕೊರೆಸಿ ನೀರಿಗೆ ವ್ಯವಸ್ಥೆಗೊಳಿಸಿ ಕೊಡಬೇಕೆಂದು ಕೋರಿದರು. ಹಾಗೂ ಶ್ರೀಮತಿ ಜಾನಮ್ಮ ರಾಮಚಂದ್ರಯ್ಯ ನವರು ಮಾತನಾಡಿ ಪಂಪು ಮೋಟಾರು ಸುಟ್ಟುಹೋದರೇ

ರೂ.4000/- ದಿಂದ 5000/-ಗಳ ಹಣವನ್ನು ರೈತರ ಬಳಿ ಕೆ.ಇ.ಬಿ. ರವರು ಕೇಳುತ್ತಾರೆ ಎಂದು ಸಭೆಯಲ್ಲಿ ತಿಳಿಸಿದರು.

ಜಿ.ಪಂ.ಮಾನ್ಯ ಸದಸ್ಯರಾದ ಡಾ:ರವಿ ಯವರು ಮಾತನಾಡಿ, ಕುಡಿಯುವ ನೀರಿನ ಅನುಷ್ಠಾನದ ಸಂಬಂಧ NRDWP ಯೋಜನೆಯಡಿ ಶಾಸಕರು, ಜಿ.ಪಂ., ತಾ.ಪಂ., ಗ್ರಾ.ಪಂ.ನ ಎಲ್ಲಾ ಚುನಾಯಿತಿ ಪ್ರತಿನಿಧಿ ಸೇರಿ ಕಾಮಗಾರಿಗಳನ್ನು ಗುರುತಿಸಿ ಕಾರ್ಯಕ್ರಮವನ್ನು ಜಾರಿಗೆ ತಂದು ಸದರಿ ಕಾರ್ಯಕ್ರಮದ ನಿರ್ವಹಣೆಯನ್ನು ಗ್ರಾ.ಪಂ.ಗೆ ಒಪ್ಪಿಸಲಾಗಿರುತ್ತದೆ. ಸರ್ಕಾರ ನೀರು ನಿರ್ವಹಣೆಗೆ ಅನುದಾನ ನೀಡುತ್ತಿದ್ದರೂ ಗ್ರಾ.ಪಂ.ಗಳಲ್ಲಿ ಈ ಬಗ್ಗೆ ಸರಿಯಾಗಿ ಮಾಹಿತಿ ಇರುವುದಿಲ್ಲ. ಹಾಳಾದ ಪಂಪು ಮೋಟಾರು ಇತರೆ ಸಾಮಗ್ರಿಗಳ ಸ್ಥಿತಿ ಏನಾಯಿತು ಎಂಬ ಬಗ್ಗೆ 2011-12 ಮತ್ತು 2012-13 ನೇ ಸಾಲಿನ ಅವಧಿಯಲ್ಲಿನ ಮಾಹಿತಿ ನೀಡುವಂತೆ ಸಭೆಯ ಗಮನ ಸೆಳೆದರು. ಈ ಸಂಬಂಧ 2011-12 ನೇ ಸಾಲಿನಲ್ಲಿ ರೂ.109.00ಕೋಟಿ, 2012-13 ನೇ ಸಾಲಿನಲ್ಲಿ ರೂ.131.00ಕೋಟಿ ಹಾಗೂ 2013-14ನೇ ಸಾಲಿಗೆ ರೂ.115.00ಕೋಟಿ ಮೊತ್ತಕ್ಕೆ ಕ್ರಿಯಾ ಯೋಜನೆಯನ್ನು ರೂಪಿಸುವ ಸಂದರ್ಭದಲ್ಲಿ ಸರ್ಕಾರದಿಂದ ಶಾಸಕರ ಕಾರ್ಯಪಡೆಯಲ್ಲಿ ನಿರ್ವಹಿಸಲಾದ ಕಾಮಗಾರಿಗಳಿಗೆ (ಕಳೆದ ಸಾಲಿನ) ರೂ.9.00ಕೋಟಿ, ಬರಪರಿಹಾರ ಯೋಜನೆ ಅಡಿ ನಿರ್ವಹಿಸಲಾದ ಕಾಮಗಾರಿಗಳಿಗೆ ಪ್ರತಿ ತಾಲ್ಲೂಕಿಗೆ ರೂ.9.00ಕೋಟಿಯಂತೆ ಅನುದಾನ ನಿಗಧಿಪಡಿಸಿರುತ್ತಾರೆ. ಸರ್ಕಾರದಿಂದ ಜಿ.ಪಂ. ಮೂಲಕ ಅನುದಾನ ನೀಡುವುದನ್ನು ಬಿಟ್ಟರೆ ಕಾಮಗಾರಿಯನ್ನು ಯಾರೂ ಸರಿಯಾದ ರೀತಿಯಲ್ಲಿ ಉಸ್ತುವಾರಿ ಮಾಡುತ್ತಿಲ್ಲ; 321 ಗ್ರಾ.ಪಂ.ಗಳ ಪೈಕಿ ಯಾವುದೇ ಒಂದು ಪಂಚಾಯತಿಯಿಂದಲೂ ಯೋಜನೆವಾರು ಮಾಹಿತಿ ಒದಗಿಸಿರುವುದಿಲ್ಲ; ಆದ್ದರಿಂದ 2011-12 ಮತ್ತು 2012-13 ನೇ ಸಾಲಿಗೆ ಸಂಬಂಧಿಸಿದಂತೆ ಜಿಲ್ಲೆಯ ಎಲ್ಲಾ 321 ಗ್ರಾ.ಪಂ.ಗಳ ಸಮಗ್ರ ಮಾಹಿತಿಯನ್ನು ತುಮಕೂರು/ಮಧುಗಿರಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಗಳಲ್ಲಿ (ಆಯಾ ವಿಭಾಗಗಳಿಗೆ ಸಂಬಂಧಿಸಿದ ಗ್ರಾ.ಪಂ.ಗಳ)ನಿರ್ವಹಿಸಬೇಕು ಎಂದು ತಿಳಿಸಿದರು.

ಜಿ.ಪಂ.ಮಾನ್ಯ ಸದಸ್ಯರಾದ ಡಾ:ರವಿ ಯವರು ಮಾತನಾಡಿ, Sustaina bility ಕಾರ್ಯಕ್ರಮದ ಅಡಿ ಮಾರ್ಕೋನಹಳ್ಳಿ ಜಲಾಶಯದಿಂದ ಸುತ್ತ-ಮುತ್ತಲಿನ 2-3ಗ್ರಾಮಗಳಿಗೆ ನೀರು ಒದಗಿಸಲು 2011-12 ರಲ್ಲಿ ಕಾಮಗಾರಿ ಮಂಜೂರಾಗಿದ್ದು ಈವರೆವಿಗೂ ಅನುಷ್ಠಾನಗೊಂಡಿರುವುದಿಲ್ಲ; ಕೊತ್ತಗೆರೆ ಗ್ರಾಮವನ್ನು ಕೈಬಿಟ್ಟಿರುವುದಾಗಿ ಮಾಹಿತಿ ಬಂದಿದ್ದು, ಸದರಿ ಗ್ರಾಮವನ್ನು ಸೇರ್ಪಡೆ ಮಾಡಬೇಕು; ಹುಲಿಯೂರುದುರ್ಗ ಗ್ರಾಮ ಮತ್ತು ಇನ್ನಿತರ ಹಳ್ಳಿಗಳಿಗೆ ಶಿಂಷಾ ನದಿಯಿಂದ ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಚೆಕ್ ಡ್ಯಾಂ ನಿರ್ಮಾಣ ಮಾಡಿ ಆ ಮೂಲಕ ನೀರು ಸಂಗ್ರಹ ಮಾಡಿ ಸುತ್ತ-ಮುತ್ತಲ ಗ್ರಾಮಗಳಿಗೆ ನೀರೊದಗಿಸಲು ವ್ಯವಸ್ಥೆ ಕಲ್ಪಿಸುವುದು ಹುಲಿಯೂರು ದುರ್ಗ ಪಂಚಾಯತಿಗೆ ಕುಡಿಯುವ ನೀರಿಗಾಗಿ ಶಿಂಷಾ ನದಿಗೆ ತಡೆ ಅಣೆ ನಿರ್ಮಾಣಕ್ಕೆ ಮಂಜೂರಾತಿ ನೀಡಿ, ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡಿ, ಈ ಬಗ್ಗೆಮಾಹಿತಿ ಒದಗಿಸಬೇಕೆಂದು ಕೋರಿದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ಚಂದ್ರಶೇಖರಬಾಬುರವರು ಮಾತನಾಡಿ, ಗುಬ್ಬಿ ತಾಲ್ಲೂಕು ಕುನ್ನಾಲ ಗ್ರಾಮಪಂಚಾಯಿತಿಯಲ್ಲಿ ರಸೀತಿ ಪುಸ್ತಕ ಮುಗಿದುಹೋಗಿ ಎರಡು ತಿಂಗಳಾದರೂ ರಸೀತಿ ಪುಸ್ತಕ ಮುದ್ರಿಸಲು ಕ್ರಮವಹಿಸದೇ ಕೇವಲ ಕೈ ಬರವಣಿಗೆಯ ಚೀಟಿಯಲ್ಲಿ ನೀಡಿ ನೇರವಾಗಿ ನಗದು ವ್ಯವಹಾರ (Cash transaction) ಮಾಡುತ್ತಿದ್ದಾರೆ, ಈ ಕುರಿತು ಸಂಬಂಧಪಟ್ಟವರು ಗಮನಿಸಬೇಕು ಹಾಗೂ ಕುಡಿಯುವ ನೀರು ಕಾಮಗಾರಿಗಳಿಗೆ ರೂ.5.00ಲಕ್ಷ ಮೊತ್ತಕ್ಕೆ ಪಟ್ಟಿ ಕೊಟ್ಟಿದ್ದು ,ಇಂಜಿನಿಯರ್

ಗಳು ಗುತ್ತಿಗೆದಾರರನ್ನು ಈ ನಿಟ್ಟಿನಲ್ಲಿ ತೀವ್ರ ಪರಿಶೀಲಿಸಿ ಒತ್ತಡ ಹಾಕುವುದು ರೂ.5.00ಲಕ್ಷದವರೆಗಿನ ಕಾಮಗಾರಿಗಳನ್ನು ತುಂಡು ಗುತ್ತಿಗೆ ಆಧಾರದಲ್ಲಿ ನಿರ್ವಹಿಸಿದಲ್ಲಿ ಅನುಕೂಲವಾಗುತ್ತದೆ. ಮೂರು OHT ಕಾಮಗಾರಿಗಳು ಮಂಜೂರಾಗಿ 3 ವರ್ಷಗಳು ಕಳೆದರೂ ಈವರೆವಿಗೆ ಕಾಮಗಾರಿ ಪೂರ್ಣಗೊಳಿಸಿರುವುದಿಲ್ಲ; ಈ ಬಗ್ಗೆ ಪೂರ್ಣ ಮಾಹಿತಿ ಪಡೆದು ಸೂಕ್ತ ಕ್ರಮವಹಿಸಬೇಕು ಎಂದು ಸಭೆಗೆ ತಿಳಿಸಿದರು. ಮಾನ್ಯ ಸದಸ್ಯರಾದ ಶ್ರೀ ಬಡೀರಣ್ಣ ನವರು ಮಾತನಾಡಿ ಸಂಘಟಿತರಾಗಿ ಎಲ್ಲಾ ಜಿ.ಪಂ. ಸದಸ್ಯರು ಸರ್ಕಾರದ ಮಂತ್ರಿಗಳ ಬಳಿ ಹೋಗಿ ತುಮಕೂರು ಜಿಲ್ಲೆಗೆ ಕುಡಿಯುವ ನೀರಿಗೆ ಅನುದಾನ ಮತ್ತು 13ನೇ ಹಣಕಾಸು ಯೋಜನೆ ಮಾರ್ಗಸೂಚಿ ಮಾರ್ಪಾಡಿಗೆ ಕೋರುವುದು.

ಚಿ.ನಾ.ಹಳ್ಳಿ ತಾ.ಪಂ. ಅಧ್ಯಕ್ಷರು ಮಾತನಾಡಿ, 13ನೇ ಹಣಕಾಸು ಯೋಜನೆಯಡಿ ತಾಲ್ಲೂಕಿಗೆ 35-40 ಲಕ್ಷ ಅನುದಾನ ಬಂದಿದೆ, ಈ ಪೈಕಿ ಶೇ.90ರಷ್ಟು ಅನುದಾನದಲ್ಲಿ ಕಟ್ಟಡ ಕಾಮಗಾರಿ (ದುರಸ್ತಿ) ನಿರ್ವಹಿಸಿ ಎಂದು ಹೇಳಿದರೆ ತಾಲ್ಲೂಕಿನಲ್ಲಿ ಕುಡಿಯುವ ನೀರಿಗೆ ಸಾಕಷ್ಟು ಸಮಸ್ಯೆ ಇದೆ; ಸಂಬಂಧಪಟ್ಟ ಗ್ರಾ.ಪಂ.ಕಾರ್ಯದರ್ಶಿ ಯವರಿಗೆ ದೂರವಾಣಿ ಕರೆ ಮಾಡಿದರೆ ಅವರು ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡಿರುತ್ತಾರೆ. ಪ್ರಸ್ತುತ ತಾಲ್ಲೂಕಿಗೆ ರೂ.1.00 ಕೋಟಿ ಅನಿರ್ಬಂಧಿತ ಅನುದಾನ ಬಂದಿದ್ದು, ಸದರಿ ಅನುದಾನದಲ್ಲಿ ಕುಡಿಯುವ ನೀರಿಗೆ ಹೆಚ್ಚಿನ ಒತ್ತು ನೀಡಬೇಕು, ಹಾಗೂ 13ನೇ ಹಣಕಾಸು ಯೋಜನೆಯ ಅನುದಾನವನ್ನೂ ಸಹ ಕುಡಿಯುವ ನೀರಿಗೆ ಬಳಸುವಂತಾಗಬೇಕು ಎಂದು ಸಭೆಗೆ ತಿಳಿಸಿದರು.

ಸಭೆಯ ಮಾನ್ಯ ಅಧ್ಯಕ್ಷರು ಮಾತನಾಡಿ, ದಿನಾಂಕ 25-06-2013 ರಂದು ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಅಧ್ಯಕ್ಷರುಗಳು ಸೇರಿ ಬೆಂಗಳೂರು(ಗ್ರಾ) ಜಿಲ್ಲಾ ಪಂಚಾಯತ್ ನಲ್ಲಿ ಸಭೆ ಸೇರುವ ಸಂಭವವಿದ್ದು, ಈ ಬಗ್ಗೆ ಸರ್ಕಾರಕ್ಕೆ ನಿಯೋಗ ಹೋಗಲು ನಿರ್ಧರಿಸಲಾಗಿದೆ; ಆ ಸಂದರ್ಭದಲ್ಲಿ ಹಿರಿಯ ಸದಸ್ಯರುಗಳು ಬಂದರೆ ಎಲ್ಲಾ ಸಮಸ್ಯೆಗಳ ಬಗ್ಗೆ ಚರ್ಚಿಸಲು ಅನುಕೂಲವಾಗುತ್ತದೆ ಎಂದು ತಿಳಿಸಿದರು; ಮುಂದುವರಿದು ಮಾತನಾಡುತ್ತಾ, ತಾಲ್ಲೂಕುವಾರು ಕಾರ್ಯನಿರ್ವಾಹಕ ಅಧಿಕಾರಿ/ ಸಹಾಯಕ ಕಾರ್ಯಪಾಲಕ ಇಂಜಿನಿಯರ್/ ಹಾಗೂ ಸಂಬಂಧಪಟ್ಟ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರು ಪರಿಹಾರ ಉತ್ತರ ನೀಡಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಕುಡಿಯುವ ನೀರಿನ ಸಮಸ್ಯೆಯನ್ನು ಸರ್ಕಾರದ ಗಮನಕ್ಕೆ ತಂದಿದ್ದೇವೆ; ಇದು ಕೇವಲ ಚರ್ಚೆಯಾಗದೆ ಕಾರ್ಯರೂಪಕ್ಕೆ ಬರಬೇಕೆಂದು ಎಲ್ಲ ಅಧಿಕಾರಿಗಳಿಗೂ ಈಗಾಗಲೇ ಸೂಚನೆಯನ್ನು ಸಹ ನೀಡಿದ್ದೇವೆ; ಜಿಲ್ಲೆಯಾದ್ಯಂತ ಸರಿಯಾಗಿ ಮಳೆ ಬಾರದೆ ಅನಿವಾರ್ಯ ಪರಿಸ್ಥಿತಿ ಉಂಟಾಗಿದೆ, ತೋಟಗಳು ಹಾಳಾಗಿವೆ; ಈ ಹಿನ್ನೆಲೆಯಲ್ಲಿ ನೂತನ ಸರ್ಕಾರ ಅಧಿಕಾರ ವಹಿಸಿಕೊಂಡ ಮೇಲೆ ರಾಜ್ಯದ ಎಲ್ಲ ಜಿಲ್ಲೆಗಳ ಜಿಲ್ಲಾಧಿಕಾರಿಗಳು/ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಸಭೆ ನಡೆಸಿ ಯಾವುದೇ ಕಾರಣಕ್ಕೂ ಯಾವುದೇ ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ಸಮಸ್ಯೆ ಇರಬಾರದು, ಸರ್ಕಾರ ಅನುದಾನ ನೀಡಲು ಸಿದ್ಧವಿದೆ ಎಂದು ತಿಳಿಸಿರುತ್ತಾರೆ, ಹಾಗೂ ಕುಡಿಯುವ ನೀರಿನ ಸಮಸ್ಯೆಯ ಸಂಬಂಧ ಸಂಪೂರ್ಣ ಮಾಹಿತಿ ಪಡೆದು ಚರ್ಚೆ ಮಾಡಿದ್ದಾರೆ; ಕಳೆದ ವರ್ಷದಲ್ಲಿ ಐ.ಎಂ.ಐ.ಎಸ್., ಕಾರ್ಯಪಡೆ ಕಾಮಗಾರಿಗಳಿಗೆ ರೂ.131.00 ಕೋಟಿ ಅನುದಾನವನ್ನು ಸರ್ಕಾರ ನೀಡಿದ್ದು, ಈ ಪೈಕಿ ರೂ.127.00 ಕೋಟಿ ಖರ್ಚಾಗಿರುತ್ತದೆ; ಒಟ್ಟು 4405 ಕಾಮಗಾರಿಗಳ ಪೈಕಿ ಕೆಲವು ತೊಂದರೆಗಳಿಂದಾಗಿ 3817 ಕಾಮಗಾರಿಗಳು ಪೂರ್ಣಗೊಂಡಿವೆ, 588 ಕಾಮಗಾರಿಗಳು ಪ್ರಗತಿಯಲ್ಲಿವೆ, ಈ ಬಗ್ಗೆ PWS (Piped Water Supply)ನ 324 ಕಾಮಗಾರಿಗಳಲ್ಲಿ 167 ಕಾಮಗಾರಿಗಳು ಪೂರ್ಣಗೊಂಡಿದ್ದು, 140 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ ಹಾಗೂ 22 ಕಾಮಗಾರಿಗಳು ಇನ್ನೂ

ಪ್ರಾರಂಭವಾಗಿರುವುದಿಲ್ಲ; ಹಾಗೆಯೇ MWS (Mini Water Supply)ನ 163 ಕಾಮಗಾರಿಗಳಲ್ಲಿ 145 ಕಾಮಗಾರಿಗಳು ಪೂರ್ಣಗೊಂಡಿದ್ದು, 14 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ ಹಾಗೂ 4 ಕಾಮಗಾರಿಗಳು ಪ್ರಾರಂಭಗೊಂಡಿರುವುದಿಲ್ಲ, ಹಾಗೆಯೇ ಕೊಳವೆಬಾವಿ ಪುನಶ್ಚೇತನ ಯೋಜನೆಯಡಿ 977 ಕಾಮಗಾರಿಗಳ ಪೈಕಿ 949 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ; ಇಷ್ಟು ಕೆಲಸ ಮಾಡಿ ಕೊಳವೆಬಾವಿಗಳನ್ನು ಕೊರೆಯುತ್ತಾರೆ, ಒಂದೇ ಊರಿನಲ್ಲಿ ಒಂಭತ್ತು ಕೊಳವೆಬಾವಿಗಳನ್ನು ಕೊರೆದಾಗ್ಯೂ ನೀರು ಕೊಡಲು ಸಾಧ್ಯವಾಗಿಲ್ಲ, ದೂರುಗಳು ಮರುಕಳಿಸುತ್ತಲೇ ಇರುತ್ತವೆ; ಐ.ಎಂ.ಐ.ಎಸ್., ಕನ್ಟಿಂಜೆನ್ಸಿ, ಬರಪರಿಹಾರ ಯೋಜನೆಗಳಡಿ ಇಷ್ಟೆಲ್ಲಾ ಸಮಸ್ಯೆಗಳು ಇವೆ, ಕ್ರಿಯಾಯೋಜನೆಯಲ್ಲಿ ಕುಡಿಯುವ ನೀರು ಕಾಮಗಾರಿ ಸೇರಿಸಲು ಅವಕಾಶವಿದ್ದರೂ ನಿರ್ವಹಣೆಯ ಸಮಸ್ಯೆಯಾಗಿದೆ; MGNREGA, ವಸತಿ ಯೋಜನೆಗಳ ಉಸ್ತುವಾರಿ, ಚುನಾವಣಾ ಕರ್ತವ್ಯ ಎಂದು ಎಲ್ಲಕ್ಕೂ ಗ್ರಾಮ ಪಂಚಾಯಿತಿಗಳ ಪಿ.ಡಿ.ಓ.ಗಳಿಗೆ ಜವಾಬ್ದಾರಿ ವಹಿಸುವುದರಿಂದ ಅವರು ಕುಡಿಯುವ ನೀರಿನ ನಿರ್ವಹಣೆಗೆ ಆದಷ್ಟು ಗಮನಹರಿಸುತ್ತಾರೆ. ಕೆಲವೊಂದು ಕಡೆ ಸ್ವಲ್ಪ ಲೋಪ ಇರುತ್ತವೆ ಅದನ್ನು ಸರಿಪಡಿಸಿ ಕೊಳ್ಳಲಾಗುತ್ತದೆ. ಆದ್ದರಿಂದ ಈ ಬಗ್ಗೆ ಹಲವು ಸಭೆಗಳನ್ನು ನಡೆಸಿ, ಸರಿಯಾದ ರೀತಿಯಲ್ಲಿ ಸಲಹೆ ನೀಡಲಾಗಿದೆ. ಕರ್ತವ್ಯ ರೀತಿಯಲ್ಲಿ ಲೋಪವೆಸಗುವ ಅಧಿಕಾರಿಗಳು ಮತ್ತು ನೌಕರರಿಗೆ ಕ್ರಮ ವಹಿಸಲು ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು. ಮುಂದುವರಿದು ಮಾತನಾಡುತ್ತಾ, ಐ.ಎಂ.ಐ.ಎಸ್. ಯೋಜನೆಯಡಿ ರೂ.115.00 ಕೋಟಿ ಅನುದಾನ ನಿಗಧಿಯಾಗಿದೆ. (ರೂ.35.00ಕೋಟಿ MWSಗೆ, ಹಾಗೂ ರೂ. 80.00ಕೋಟಿ PWSಗೆ), ಇನ್ನೂ ರೂ. 30.00 ಕೋಟಿ ಕೊಡುವ ಸಂಭವವಿದೆ. ನಿರ್ವಹಣೆ (O&M) ಕೂಡ ಅದರಲ್ಲೇ ಬರುತ್ತದೆ; ಒಂದು ಕೊಳವೆಬಾವಿ ನಿರ್ವಹಣೆಗೆ ರೂ.1000 ಕಿರು ನೀರು ಸರಬರಾಜು ಯೋಜನೆಗೆ 5000 ಮತ್ತು ಕೊಳಾಯಿ ನೀರು ಸರಬರಾಜು ಯೋಜನೆಗೆ 10000 ಪರಿಷ್ಕರಿಸಿರುವುದನ್ನು ಸಭೆಯ ಗಮನಕ್ಕೆ ತಂದರು. ಕ್ರಿಯಾ ಯೋಜನೆಯಲ್ಲಿ ಸೇರಬೇಕು; ಎಂದು ಅಧ್ಯಕ್ಷರು ಸೂಚಿಸಿದರು. ಎಲ್ಲಾ ಜಿ.ಪಂ. ಸದಸ್ಯರ ಸಲಹೆ ತೆಗೆದುಕೊಂಡು ಉದಾಹರಣೆಗೆ ಐ.ಎಂ.ಐ.ಎಸ್. ಪ್ರಕಾರ ಕಳೆದ ಸಾಲಿನಲ್ಲಿ ಸಮೀಕ್ಷೆ ಮಾಡಿದಾಗ ಅಪ್ ಲೋಡ್ ನೀರು ಎಂದು ಐ.ಎಂ.ಐ.ಎಸ್.ನಲ್ಲಿ ಕಳೆದ ಸಾಲಿನಲ್ಲಿ ಕ್ರಿಯಾ ಯೋಜನೆಯಲ್ಲಿ ಸೇರಿಸಿದ್ದರೂ 40 ಎಲ್.ಪಿ.ಸಿ.ಡಿ ಇರುವುದರಿಂದ ಈ ಸಾಲಿನಲ್ಲಿ ಬಾವಿ ಭತ್ತಿಹೋಗಿ ನೀರಿಲ್ಲದಿದ್ದರೂ ಐ.ಎಂ.ಐ.ಎಸ್.ಗೆ ಸೇರಿಸಲು ಸಾಧ್ಯವಾಗುವುದಿಲ್ಲ. ಕಂಪ್ಯೂಟರ್ ನಲ್ಲಿ ಅವಕಾಶವಿಲ್ಲ. ಆದುದರಿಂದ ಎಲ್ಲಾ ಪಂಚಾಯಿತಿ ವ್ಯಾಪ್ತಿಗಳಲ್ಲಿ ಸರ್ವೆ ಮಾಡಿಸಿದ್ದು, ಅದರ ಪ್ರಕಾರ ಹೆಚ್ಚುವರಿ ರೂ.31.25 ಕೋಟಿ ಅನುದಾನದ ಅಗತ್ಯವಿದೆ ಎಂದು ತಿಳಿಯಲಾಗಿದೆ, ಇರುವ ಅನುದಾನವನ್ನು ಕೇಳಿದರೆ ಕೊಡಲಾಗುವುದಿಲ್ಲ, ಆದುದರಿಂದ ಐ.ಎಂ.ಐ.ಎಸ್ ಅಡಿ ಎಷ್ಟು ಸೇರಿಸಲು ಸಾಧ್ಯವೋ ಅಷ್ಟು ಕಾಮಗಾರಿಗಳನ್ನು ಸೇರಿಸಲು ವ್ಯವಸ್ಥೆ ಮಾಡಬಹುದಾಗಿರುತ್ತದೆ; ಇಲ್ಲವಾದಲ್ಲಿ ಸದರಿ ಕಾಮಗಾರಿಗಳಿಗೆ ಹೆಚ್ಚುವರಿ ಅನುದಾನ ನೀಡುವಂತೆ ಕೋರಿ ಸರ್ಕಾರವನ್ನು ಕೋರಬೇಕಾಗುತ್ತದೆ; ಕಾರ್ಯಪಡೆ ವತಿಯಿಂದ ನಿರ್ವಹಿಸಲಾಗುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಪ್ರತಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ರೂ. 20.00 ಲಕ್ಷದಂತೆ ಸರ್ಕಾರ ರೂ. 2.00 ಕೋಟಿ ಅನುದಾನ ನೀಡಿದೆ, ಆದಾಗ್ಯೂ ಇನ್ನೂ 799 ಕಾಮಗಾರಿಗಳಿಗೆ ರೂ.10.00 ಕೋಟಿ ಅನುದಾನದ ಅಗತ್ಯವಿದೆ ಎಂದು ಸಭೆಗೆ ವಿವರಿಸಿದರು.

ನಂತರ ಮಾತನಾಡಿ, Quality affected ಬಗ್ಗೆ ಗ್ರಾ.ಅ.ಪಂ.ರಾ. ಮಾನ್ಯ ಸಚಿವರು ಚರ್ಚೆ ಮಾಡಿರುತ್ತಾರೆ; (only borewell, no surface water), 11 ಕೊಳವೆಬಾವಿಗಳು ವಿಫಲವಾದರೆ 12ನೆಯ ಕೊಳವೆಬಾವಿ ಕೊರೆಯಬಹುದೆಂದು ತಿಳಿಸಿರುತ್ತಾರೆ; ಪ್ರಸ್ತುತ ಹೇಮಾವತಿ ನೀರು ತರಲು

ರೂ. 395.00 ಕೋಟಿ ಮೊತ್ತಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ; ಮಾನ್ಯ ಸಚಿವರು ಗದಗ್ ಜಿಲ್ಲೆಯವರಾದ್ದರಿಂದ ಆ ಭಾಗದಲ್ಲಿ ಹೋಗಿ ನೋಡುವಂತೆ ತಿಳಿಸಿದ್ದರು; ಅದರಂತೆ ಅಲ್ಲಿ ಹೋಗಿ ನೋಡಲಾಗಿ ಅಲ್ಲಿ ಪ್ರತಿ ಮನೆಗೆ ದಿನಕ್ಕೆ 10 ಕೊಡ ನೀರು ಕೊಡಲು (coin box) ವ್ಯವಸ್ಥೆ ಮಾಡಿದ್ದಾರೆ. ಅದರಂತೆ ನಮ್ಮ ಜಿಲ್ಲೆಯಲ್ಲಿಯೂ ಮಾಡುವ ಉದ್ದೇಶದಿಂದ ಕಾರ್ಯಪಾಲಕ ಇಂಜಿನಿಯರ್ ರವರು 4-5 ಕಡೆ ಅನುಷ್ಠಾನವನ್ನು ಪ್ರಾಯೋಗಿಕವಾಗಿ ಹಮ್ಮಿಕೊಳ್ಳಲು ಪ್ರಸ್ತಾವನೆ ಸಿದ್ದಪಡಿಸುತ್ತಿದ್ದಾರೆ. ಪ್ರಸ್ತುತ 9912 ಕೊಳವೆಬಾವಿಗಳು ಕೆಲಸ ಮಾಡುತ್ತಿವೆ, ಸದರಿ ಕೊಳವೆಬಾವಿಗಳ ಪೈಕಿ ಸಮಸ್ಯಾತ್ಮಕ 1850 ಗ್ರಾಮಗಳಲ್ಲಿನ ಕೊಳವೆಬಾವಿಗಳ ನೀರನ್ನು ಪರೀಕ್ಷೆ ಮಾಡಿಸಲಾಗಿ 1385 ಗ್ರಾಮಗಳ ಕೊಳವೆಬಾವಿಗಳಲ್ಲಿನ (ಸಿರಾ, ಮಧುಗಿರಿ, ಕೊರಟಗೆರೆ, ಪಾವಗಡ, ಚಿ.ನಾ.ಹಳ್ಳಿ) ನೀರು ಕುಡಿಯಲು ಯೋಗ್ಯವಾಗಿಲ್ಲ ಎಂದು (contaminated) ತಿಳಿದು ಬಂದಿರುತ್ತದೆ, ಈ ಮೇರೆಗೆ ಗ್ರಾ.ಅ.ಪಂ.ರಾ. ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಆದೇಶದಂತೆ ನೀರು ಶುದ್ದೀಕರಣ ಘಟಕವನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆಯಿಂದ ತುಮಕೂರಿಗೆ ಮಂಜೂರು ಮಾಡಿರುತ್ತಾರೆ. ಮಧುಗಿರಿ, ಪಾವಗಡ, ಕೊರಟಗೆರೆ, ಚಿ.ನಾ.ಹಳ್ಳಿ ತಾಲ್ಲೂಕುಗಳಲ್ಲಿ ಒಟ್ಟು 117 plantಗಳು ಕೆಲಸ ಮಾಡುತ್ತಿವೆ, ಆದರೂ ಇದು ಸಾಕಾಗುತ್ತಿಲ್ಲವಾದ್ದರಿಂದ ಸಿರಾ ತಾ:ಗೆ 122, ಮಧುಗಿರಿ ತಾ:ಗೆ 72, ಪಾವಗಡ ತಾ:ಗೆ 113 ರಂತೆ ಇನ್ನೂ 400-500 ಹೆಚ್ಚುವರಿ plantಗಳನ್ನು ನೀಡಬೇಕೆಂದು ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿದ್ದೇವೆ. ಪಾವಗಡ ತಾಲ್ಲೂಕಿನ ವೈ.ಎನ್.ಹೊಸಕೋಟೆಯಲ್ಲಿನ ನೀರಿನ ಸಮಸ್ಯೆಗೆ ಸಚೇತನ ಯೋಜನೆಯಡಿ ರೂ. 9.00 ಕೋಟಿ ನೀಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.

ನಂತರ ಮಾತನಾಡಿ, ಮಾನ್ಯ ಸದಸ್ಯರುಗಳ ಸಲಹೆಯಂತೆ ತಾಲ್ಲೂಕುವಾರು ಕಾರ್ಯನಿರ್ವಾಹಕ ಅಧಿಕಾರಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಹಾಗೂ ಸಂಬಂಧಪಟ್ಟ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಗಳು ಸಭಾಂಗಣದ ವೇದಿಕೆಯ ಮುಂಭಾಗಕ್ಕೆ ಬಂದು, ಕ್ರಿಯಾ ಯೋಜನೆಯಲ್ಲಿ ಯಾವುದೇ ಒಂದು ಗ್ರಾಮ ಸೇರಿದೆ/ಸೇರಿಲ್ಲ, ಸೇರಿಸುವ ಅವಶ್ಯಕತೆಯಿದೆ, ವಿಫಲಗೊಂಡಿರುವ ಕೊಳವೆಬಾವಿಗಳಿಗೆ ಅಳವಡಿಸಲಾಗಿದ್ದ ಪಂಪು-ಮೋಟರ್ ಗಳು ಏನಾಗಿವೆ?, ಎಂಬ ಬಗ್ಗೆ ಸಭೆಗೆ ಸಮಗ್ರ ಮಾಹಿತಿ ನೀಡುತ್ತಾರೆ, ಎಲ್ಲರೂ ಶಾಂತಚಿತ್ತರಾಗಿ ಆಲಿಸಬೇಕು ಎಂದು ಸಭೆಗೆ ತಿಳಿಸಿದರಲ್ಲದೆ, ಒಂದು ವೇಳೆ ಯಾವುದೇ ಒಂದು ಗ್ರಾಮವನ್ನು ಐ.ಎಂ.ಐ.ಎಸ್.ಅಡಿ ಸೇರಿಸಲಾಗದಿದ್ದರೆ ಪ್ರತ್ಯೇಕವಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಮಂಜೂರು ಮಾಡಿಸಲು ಪ್ರಯತ್ನಿಸಲಾಗುವುದು ಎಂದು ತಿಳಿಸಿದರು.

ಜಿ.ಪಂ.ಮಾನ್ಯ ಸದಸ್ಯರಾದ ಡಾ:ರವಿ ಯವರು ಮಾತನಾಡಿ, ಅಧ್ಯಕ್ಷರು ಅಥವಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಹಂತದಲ್ಲಿ, ಸರ್ಕಾರದಿಂದ ಹಣ ಬಿಡುಗಡೆ ಮಾಡುವಂತೆ ಒತ್ತಡ ಹೇರಿದರೆ ಒಳಿತೆಂದು ಸಭೆಯ ಗಮನಕ್ಕೆ ತಂದರು.

ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ಉಪ ವಿಭಾಗ,. ಶಿರಾ ರವರು ಮಾತನಾಡಿ, ಶಿರಾ ತಾಲ್ಲೂಕು ವ್ಯಾಪ್ತಿಯಲ್ಲಿ 90 ಕೊಳವೆಬಾವಿಗಳ ಪೈಕಿ 13 ಕೊಳವೆಬಾವಿಗಳು ವಿಫಲಗೊಂಡಿದ್ದು, 77 ಕೊಳವೆಬಾವಿಗಳು ಬಾಕಿ ಇರುತ್ತವೆ; ಈ ಪೈಕಿ 25 ಕೊಳವೆಬಾವಿಗಳನ್ನು ಕ್ರಿಯಾ ಯೋಜನೆಯಲ್ಲಿ ಸೇರಿಸಲು ಯೋಜಿಸಲಾಗಿದ್ದು, ಉಳಿಕೆ ಕೊಳವೆಬಾವಿಗಳಿಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಯವರಿಗೆ ಸಲ್ಲಿಸಲು ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಲಾಗಿದೆ; ರೂ.214.00 ಲಕ್ಷ ಮೊತ್ತಕ್ಕೆ 90 ಕೊಳವೆಬಾವಿಗಳನ್ನು ಸೇರಿಸಿ ಪ್ರತ್ಯೇಕ ಕ್ರಿಯಾ ಯೋಜನೆ ತಯಾರಿಸಲಾಗಿದೆ; ಹಾಗೆಯೇ ಪೈಪ್ ಲೈನ್

ಮತ್ತು ಮೋಟಾರ್ ಅಳವಡಿಕೆಗೆ ಪ್ರತ್ಯೇಕ ಕ್ರಿಯಾ ಯೋಜನೆ ತಯಾರಿಸಲಾಗಿದೆ ( ಈ ರೀತಿ ಒಟ್ಟು ಮೂರು ಪಟ್ಟಿಗಳನ್ನು ತಯಾರಿಸಲಾಗಿದೆ ) ಎಂದು ಸಭೆಗೆ ತಿಳಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಕುಡಿಯುವ ನೀರಿಗೆ ಸಮಸ್ಯೆ ಇರುವ ಗ್ರಾಮಗಳ ಪೈಕಿ ಎಷ್ಟು ಕೊಳವೆಬಾವಿಗಳಿಗೆ ಪಂಪು ಮೋಟಾರ್ ಅಳವಡಿಸಲಾಗಿದೆ?, ಎಷ್ಟು ಕೊಳವೆಬಾವಿಗಳಿಗೆ ಪಂಪು ಮೋಟಾರ್ ಅಳವಡಿಸಬೇಕಾಗಿದೆ?, Quality affected ಪ್ರಕರಣಗಳು ಎಷ್ಟು ಇವೆ? ಎಷ್ಟು ಪಂಪು ಮೋಟಾರ್ ಗಳನ್ನು ಬದಲಿ ಉಪಯೋಗ ಮಾಡಲಾಗಿದೆ? ಬದಲಿಸಿದ ಮೋಟಾರ್-ಪಂಪುಗಳನ್ನು ಎಲ್ಲಿ ಸಂಗ್ರಹಿಸಿ ನಿರ್ವಹಿಸಲಾಗಿದೆ ಎಂಬ ಬಗ್ಗೆ ತಾಲ್ಲೂಕುವಾರು ಸಂಬಂಧಪಟ್ಟ ಕಾರ್ಯನಿರ್ವಾಹಕ ಅಧಿಕಾರಿ/ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಹಾಗೂ ಸಂಬಂಧಪಟ್ಟ ಪಂ.ರಾ.ಇಂ.ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಇವರುಗಳು ಸಭೆಗೆ ಸಮಗ್ರ ಮಾಹಿತಿ (ಅಂಕಿ-ಅಂಶ) ಒದಗಿಸಬೇಕೆಂದು ಮತ್ತೊಮ್ಮೆ ಅಧಿಕಾರಿಗಳಿಗೆ ಸ್ಪಷ್ಟ ಸೂಚನೆ ನೀಡಿದರು.

ಅದರಂತೆ ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿ/ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಹಾಗೂ ಸಂಬಂಧಪಟ್ಟ ಪಂ.ರಾ.ಇಂ.ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಇವರುಗಳು ತಮ್ಮ-ತಮ್ಮ ಕಾರ್ಯವ್ಯಾಪ್ತಿಗೆ ಸಂಬಂಧಿಸಿದಂತೆ ಕುಡಿಯುವ ನೀರಿನ ಕಾಮಗಾರಿಗಳ ಪ್ರಗತಿಯನ್ನು ಸಭೆಯ ಗಮನಕ್ಕೆ ತಂದರು.

ಜಿ.ಪಂ.ಮಾನ್ಯ ಸದಸ್ಯರಾದ ಡಾ:ರವಿ ಯವರು ಮಾತನಾಡಿ, 2013-14ನೇ ಸಾಲಿನಲ್ಲಿ IMIS ಗೆ ಅಳವಡಿಸಲು ಹೊಸ ಕಾಮಗಾರಿಗಳನ್ನು ತೆಗೆದುಕೊಂಡು ಹಳೇ ಕಾಮಗಾರಿಗಳ ಯೋಜನೆಗೆ ಸಂಬಂಧಿಸಿದಂತೆ ಸರ್ಕಾರದಿಂದ ಹಣ ಪಡೆಯಲು ಕ್ರಮವಹಿಸಬೇಕು; ಅಂತೆಯೇ, ಯಡೆಯೂರು IMIS ಯೋಜನೆಯಡಿ ತೆಗೆದುಕೊಳ್ಳಲು ಬರುವುದಿಲ್ಲವಾದ್ದರಿಂದ ಅದಕ್ಕೆ ಸರ್ಕಾರದ ಮಟ್ಟದಲ್ಲಿ ಪ್ರಯತ್ನಿಸಿ ಅನುದಾನ ಪಡೆಯಬೇಕು ಎಂದು ಸಭೆಗೆ ತಿಳಿಸಿದರು.

ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ಮಧುಗಿರಿ ಇವರು ಮಾತನಾಡಿ, ಹೊಸ ಕಾಮಗಾರಿಗಳು ಇಲ್ಲವಾದಲ್ಲಿ ಹಳೆಯ ಕಾಮಗಾರಿಗಳಿಗೆ ಶೇ.40ರಷ್ಟು ಅನುದಾನವನ್ನು ಬಳಸಿಕೊಳ್ಳಬಹುದೆಂದು ಮಾರ್ಗಸೂಚಿಯಲ್ಲಿ ತಿಳಿಸಿರುವುದರಿಂದ ಅದರಂತೆ ಕುಡಿಯುವ ನೀರಿಗಾಗಿ CRF ಅಡಿ ಕೊರೆದ ಕೊಳವೆಬಾವಿಗಳಿಗೆ ಪಂಪು ಮೋಟರ್ ಅಳವಡಿಸಲು ಹಾಗೂ IMIS ಅಡಿ ಕೊಳವೆಬಾವಿಗಳನ್ನು ಕೊರೆಯಲು (ಈಗಾಗಲೇ ಕೆ.ಡಿ.ಪಿ.ಸಭೆಯಲ್ಲಿ ಚರ್ಚಿಸಿದಂತೆ) ಪಟ್ಟಿ ಪಡೆಯಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಮಾನ್ಯ ಮುಖ್ಯ ಮಂತ್ರಿಯವರು ಮತ್ತು ಜಿಲ್ಲಾ ಮಾನ್ಯ ಉಸ್ತುವಾರಿ ಸಚಿವರ ಸಭೆಯಲ್ಲಿ ಚರ್ಚೆಯಂತೆ, ಭಾರತ ಸರ್ಕಾರದ ನಿರ್ದೇಶನದ ಮೇರೆಗೆ ಕೊಳವೆಬಾವಿಗಳನ್ನು ಕೊರೆದು ಅವುಗಳಿಗೆ ಪಂಪು-ಮೋಟರ್ ಅಳವಡಿಸುವ ಸಂಬಂಧ ಕಾರ್ಯಪಡೆ ಸಮಿತಿ ಸಭೆಯಲ್ಲಿ ನಿರ್ಣಯ ಕೈಗೊಂಡು ಸದರಿ ನಿರ್ಣಯವನ್ನು ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರಿಗೆ ಸಲ್ಲಿಸಬೇಕು ಎಂದು ತಿಳಿಸಿರುತ್ತಾರೆ, ಹಾಗೂ ಅದನ್ನು ಬರಪರಿಹಾರ ಕಾರ್ಯಕ್ರಮದಡಿ ಸೇರಿಸಿ ಎರಡನ್ನೂ ಅನುಮೋದಿಸಿಕೊಂಡು ಸರ್ಕಾರದಿಂದ ಹೆಚ್ಚುವರಿ ಅನುದಾನ ಕೋರಲಾಗುವುದೆಂದೂ ಸಹ ತಿಳಸಿರುತ್ತಾರೆ ಎಂಬ ಅಂಶವನ್ನು ಸಭೆಗೆ ತಿಳಿಸಿದರು.

ಸಭೆಯ ಮಾನ್ಯ ಅಧ್ಯಕ್ಷರು ಮಾತನಾಡಿ, ಸಮಸ್ಯೆಯ ಬಗ್ಗೆ ಜಿಲ್ಲಾ ಪಂಚಾಯತ್ ಮಾನ್ಯ ಸದಸ್ಯರುಗಳಿಗೆ ಮಾಹಿತಿ ಇರುವುದರಿಂದ ಎಲ್ಲ ತಾಲ್ಲೂಕುಗಳಲ್ಲೂ ಸಂಬಂಧಪಟ್ಟ ಜಿ.ಪಂ.ಸದಸ್ಯರುಗಳ ಗಮನಕ್ಕೆ ತಂದು ಕ್ರಿಯಾ ಯೋಜನೆ ಮಾಡಬೇಕು; ಸಮನ್ವಯದ ಕೊರತೆ ಬರದಂತೆ ನೋಡಿಕೊಳ್ಳಬೇಕು ಎಂದು ಇಂಜಿನಿಯರ್ ಗಳಿಗೆ ಸೂಚಿಸಿದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ಬಡೀರಣ್ಣನವರು ಮಾತನಾಡಿ, ಶಿರಾ ತಾಲ್ಲೂಕಿನ ಮುದ್ದೇನಹಳ್ಳಿ ಗೊಲ್ಲರಹಟ್ಟಿ ಗ್ರಾಮಕ್ಕೆ ಸುವರ್ಣಮುಖಿ ನದಿಯಿಂದ ನೀರು ತರಲು ಸರ್ಕಾರದಿಂದ ರೂ.35.00 ಕೋಟಿ ಅನುದಾನ ಒದಗಿಸಿದ್ದು, ಈ ಪೈಕಿ ರೂ.27.00 ಕೋಟಿ ಹಣವನ್ನು ಖರ್ಚು ಮಾಡಿರುತ್ತಾರೆ; ಆದರೆ ಕೊಳವೆಬಾವಿ ಕೊರೆಸಲು ವ್ಯವಸ್ಥೆಗೊಳಿಸಿರುವುದಿಲ್ಲ, ಸದರಿ ಗ್ರಾಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅಲೆಮಾರಿ/ಹಕ್ಕಿ-ಪಿಕ್ಕಿ ಜನಾಂಗದವರು ವಾಸವಿದ್ದು, ಅವರು ಬಂದು ಕೇಳಿಲ್ಲ, ಇವರು ಕೊಳವೆಬಾವಿ ಕೊರೆಸಿಲ್ಲ; ಆದುದರಿಂದ ಪ್ರಸ್ತುತ, ಸಭೆಯ ಮಾನ್ಯ ಅಧ್ಯಕ್ಷರ ಮಾತಿಗೆ(ruling) ನಾವು ಬದ್ಧರಾಗಿದ್ದೇವೆ ಎಂದು ಸಭೆಗೆ ತಿಳಿಸಿದರು.

ಜಿ.ಪಂ. ಮಾನ್ಯ ಸದಸ್ಯರಾದ ಶ್ರೀ ಸಿ.ಆರ್. ಉಮೇಶ್ ರವರು ಮಾತನಾಡಿ, 2011-12ನೇ ಸಾಲಿನಲ್ಲಿ OHT ಕಾಮಗಾರಿಗಳನ್ನು ಚುರುಕುಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಸೂಚನೆ ನೀಡಬೇಕೆಂದು ಕೋರಿದರು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಒಟ್ಟು 22 OHT ಕಾಮಗಾರಿಗಳನ್ನು KRIDL (ಕರ್ನಾಟಕ ಭೂ ಸೇನಾ ನಿಗಮ ) ಸಂಸ್ಥೆಗೆ ವಹಿಸಲಾಗಿದ್ದು ಅವರು ಕಾಮಗಾರಿ ಕೈಗೆತ್ತಿಕೊಂಡಿರುತ್ತಾರೆ ಎಂದು ತಿಳಿಸಿದರು.

ಜಿ.ಪಂ. ಮಾನ್ಯ ಸದಸ್ಯರಾದ ಶ್ರೀ ಬಡೀರಣ್ಣನವರು ಮಾತನಾಡಿ, ಶಿರಾ ತಾಲ್ಲೂಕು ಶಿವನೆಪಾಳ್ಯದಲ್ಲಿ ಕೊಳವೆಬಾವಿ ವಿದ್ಯುತ್ತೀಕರಣಕ್ಕೆ ರೂ.1.60ಲಕ್ಷ (21 ಕಂಬಗಳ ಅಂದಾಜುಪಟ್ಟಿ) ಡಿಪಾಸಿಟ್ ಕಟ್ಟಿಯೂ ಸಹ ಟಿ.ಸಿ.ಅಳವಡಿಸಿರುವುದಿಲ್ಲ ಮತ್ತು ಕೊಳವೆಬಾವಿಗೆ ಸರ್ವೀಸ್ ನೀಡಿರುವುದಿಲ್ಲವೆಂದು ಸಭೆಗೆ ತಿಳಿಸಿದರು. ಪ್ರತಿಯಾಗಿ ಬೆಸ್ಕಾಂ ಅಧಿಕಾರಿಗಳು ಮಾತನಾಡಿ, ತಕ್ಷಣ ಸಮಸ್ಯೆ ಬಗೆಹರಿಸಿಕೊಡುವುದಾಗಿ ಭರವಸೆಯಿತ್ತರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ಸಿ.ಆರ್. ಉಮೇಶ್ ರವರು ಮಾತನಾಡಿ, 2013-14ನೇ ಸಾಲಿನಲ್ಲಿ ನಡೆದ SSLC ಪರೀಕ್ಷೆಯಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮತ್ತು ಮಧುಗಿರಿ ಶೈಕ್ಷಣಿಕ ಜಿಲ್ಲೆಯ ಉಪ ನಿರ್ದೇಶಕರ ಮತ್ತು ಶಿಕ್ಷಣ ಸಮುದಾಯ ಹಾಗೂ ಪೋಷಕರ ಸಹಕಾರ ಮತ್ತು ಪರಿಶ್ರಮದಿಂದಾಗಿ ಮಧುಗರಿ ಶೈಕ್ಷಣಿಕೆ ಜಿಲ್ಲೆಯು ಅತ್ಯುತ್ತಮ ಫಲಿತಾಂಶ ಪಡೆದಿರುವುದನ್ನು ಮುಕ್ತಕಂಠದಿಂದ ಪ್ರಶಂಸಿದರು. ಹಾಗೂ ಕಳೆದ ಸಾಲಿನಂತೆ ಈ ಬಾರಿಯೂ ಸಹ ಪರೀಕ್ಷಾವಧಿಯ ಒಂದು ತಿಂಗಳ ಮುಂಚೆ ವಿಶೇಷ ಬೋಧನಾ ತರಗತಿಗಳನ್ನು ನಡೆಸುವುದು ಮತ್ತು ಜಿ.ಪಂ.ನ ಎಲ್ಲಾ ಮಾನ್ಯ ಸದಸ್ಯರುಗಳು ಸಾಮೂದಾಯಿಕ ಸಹಭಾಗಿತ್ವದಲ್ಲಿ ಸಹಕರಿಸಿದಲ್ಲಿ ಜಿಲ್ಲೆಯು ಶೈಕ್ಷಣಿಕವಾಗಿ ಮುಂದೆ ಬರುತ್ತದೆ ಎಂದು ಸಭೆಗೆ ತಿಳಿಸಿದರು.

ಮುಂದುವರೆದು ಮಾತನಾಡುತ್ತಾ, ಶಿರಾ ರೇಷ್ಮೆ ಇಲಾಖೆಯ ಜಾಗದಲ್ಲಿ ಉರ್ದು ಶಾಲೆ ನಡೆಸಲು ಹಸ್ತಾಂತರಿಸುವ ಬಗ್ಗೆ ಕಳೆದ ಸಾಮಾನ್ಯ ಸಭೆಯಲ್ಲಿ ನಿರ್ಣಯವಾಗಿದ್ದರೂ ಸಹ ಅನುಪಾಲನಾ ವರದಿಯಲ್ಲಿ ಮಾಹಿತಿ ಇರುವುದಿಲ್ಲ ಎಂದು ಸಭೆಯ ಗಮನಕ್ಕೆ ತಂದರು. ಪ್ರತಿಯಾಗಿ ಉಪ ನಿರ್ದೇಶಕರು, ರೇಷ್ಮೆ ಇಲಾಖೆ ಇವರು ಮಾತನಾಡಿ ಸದರಿ ಜಾಗವು ತಾತ್ಕಾಲಿಕವಾಗಿ ಉರ್ದು ಶಾಲೆ ನಡೆಸಲು ಕೊಡಲಾಗಿದೆ. ಶಾಲೆ ಕಟ್ಟಡ ಕಟ್ಟಲು ಇನ್ನು ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿ ಪಡಿಸಲು ಶಾಶ್ವತವಾಗಿ

ಶಿಕ್ಷಣ ಇಲಾಖೆಗೆ ಹಸ್ತಾಂತರಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಲು ತೀರ್ಮಾನಿಸಲಾಗಿದೆ. ಈ ಬಗ್ಗೆ ಅನುಮೋದನೆಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ತಿಳಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಜಿಲ್ಲಾ ಮಟ್ಟದ ಇಲಾಖೆಗಳ ಅಧಿಕಾರಿಗಳು ಸಭೆಯ ನಿರ್ಣಯಕ್ಕೆ ಕಾಯದೆ, ಸಭೆಯಲ್ಲಿ ಚರ್ಚಿಸುವಂತೆ ತಮ್ಮ ತಮ್ಮ ಇಲಾಖೆಗೆ ಸಂಬಂಧಿಸಿದ ವಿಷಯಗಳನ್ನು ಗುರುತು ಮಾಡಿಕೊಂಡು ಅದರಂತೆ ಕ್ರಮವಹಿಸಬೇಕು ಎಂದು ಸೂಚನೆ ನೀಡಿದರು.

ಸಭೆಯ ಮಾನ್ಯ ಅಧ್ಯಕ್ಷರು ಮಾತನಾಡಿ, ಚರ್ಚೆಗೆ ಬಂದ ವಿಷಯಕ್ಕೆ ಅನುಪಾಲನಾ ವರದಿಯನ್ನು ಕೂಡಲೇ ಕಳುಹಿಸಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು.

ಜಿ.ಪಂ. ಮಾನ್ಯ ಸದಸ್ಯರಾದ ಶ್ರೀಮತಿ ಲೋಹಿತಾಬಾಯಿ ಯವರು ಮಾತನಾಡಿ, ಚಿ.ನಾ.ಹಳ್ಳಿ ತಾಲ್ಲೂಕಿನ ಕಂದಿಕೆರೆ ಗ್ರಾಮದ ಮೂರು ಪ್ರೌಢಶಾಲೆಗಳಲ್ಲಿ ಆಂಗ್ಲ ಭಾಷಾ ಶಿಕ್ಷಕರಿಲ್ಲದೆ ಮಕ್ಕಳು ಆಂಗ್ಲ ಪಠ್ಯ ವಿಷಯದಲ್ಲಿ ಹಿಂದುಳಿದಿರುತ್ತಾರೆ; ಈ ಕುರಿತು ಡಿ.ಡಿ.ಪಿ.ಐ.ರವರ ಗಮನಕ್ಕೆ ತಂದರೂ ಸಹ ಅವರು ಯಾವುದೇ ಕ್ರಮ ವಹಿಸಿರುವುದಿಲ್ಲ; ಆದುದರಿಂದ ಸದರಿ ಗ್ರಾಮದ ಮೂರೂ ಶಾಲೆಗಳಿಂದ ಒಬ್ಬರು ಆಂಗ್ಲ ಭಾಷಾ ಶಿಕ್ಷಕರನ್ನಾದರೂ ವ್ಯವಸ್ಥೆಗೊಳಿಸಿಕೊಡುವಂತೆ ಕೋರಿದರು. ಪ್ರತಿಯಾಗಿ ಉಪ ನಿರ್ದೇಶಕರು, ಸಾ.ಶಿ.ಇಲಾಖೆ, ತುಮಕೂರುರವರು ಕೂಡಲೇ ಕ್ರಮವಹಿಸಲಾಗುವುದು ಎಂದು ಸಭೆಗೆ ತಿಳಿಸಿದರು.

ಜಿ.ಪಂ. ಮಾನ್ಯ ಸದಸ್ಯರಾದ ಶ್ರೀ ಆರ್.ಸಿ.ಆಂಜಿನಪ್ಪನವರು ಮಾತನಾಡಿ, ಪಾವಗಡ ತಾಲ್ಲೂಕಿನ ರೊಪ್ಪ, ಕನಕಾಪುರ, ಮುರಾರೆಹಳ್ಳಿ ಗ್ರಾಮಗಳಲ್ಲಿ ನೀರಿನ ಸಮಸ್ಯೆಯಿರುವುದಾಗಿ ಸಭೆಯ ಗಮನಕ್ಕೆ ತಂದರು.

ಜಿ.ಪಂ.ಮಾನ್ಯ ಸದಸ್ಯರಾದ ಡಾ: ರವಿಯವರು ಮಾತನಾಡಿ, ಕೊರೆದ ಕೊಳವೆಬಾವಿಗಳಿಗೆ ಕೂಡಲೇ ಪಂಪು-ಮೋಟರ್ ಅಳವಡಿಸಿ ಸರ್ವೀಸ್ ಪಡೆಯುವ ಕುರಿತು ಮಾನ್ಯ ಶಾಸಕರುಗಳೊಂದಿಗೆ ಚರ್ಚಿಸಿದರೆ ಪರಿಹಾರ ಸಿಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು ಮಾತನಾಡಿ, Data Upload ಮಾಡಲು ಇರುವುದರಿಂದ Ydu ಗಣಕ ಯಂತ್ರದ ಮೂಲಕ ಸಮಸ್ಯಾತ್ಮಕ ಗ್ರಾಮಗಳ Data ಫೀಡ್ ಮಾಡಬೇಕಾಗಿರುತ್ತದೆ. ಕುಡಿಯುವ ನೀರಿನ ಬಗ್ಗೆ, ಇನ್ನು ಎಷ್ಟು ಚರ್ಚೆ ಮಾಡಿದರೂ ಅಷ್ಟೇ ಏಕೆಂದರೆ ಕೆಲವೆಡೆ ಮಾನ್ಯ ಶಾಸಕರುಗಳು ಹೇಳಿರುತ್ತಾರೆ, ಕೆಲವೆಡೆ ಜಿಲ್ಲಾ ಪಂಚಾಯತ್ ವತಿಯಿಂದ ಮಾಡಿರುತ್ತಾರೆ, ಕೆಲವೆಡೆ ಜಿ.ಪಂ.ಮಾನ್ಯ ಸದಸ್ಯರುಗಳು ಹೇಳಿರುತ್ತಾರೆ; ಇವುಗಳಿಗೆ ಕಾರ್ಯಪಡೆ/ಸರ್ಕಾರದಿಂದ ಅನುಮೋದನೆ ಯಾಗದಿದ್ದರೆ, ಅಂತಹ ಪ್ರಕರಣಗಳಿಗೆ ಬೆಸ್ಕಾಂನವರು ಸರ್ವೀಸ್ ಕೊಡಲು ಸಾಧ್ಯವಾಗುವುದಿಲ್ಲ ಎಂದು ಪ್ರತಿಕ್ರಿಯಿಸಿದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀಮತಿ ನಳಿನಿ ನವರು ಮಾತನಾಡಿ, ಪಾವಗಡ ತಾಲ್ಲೂಕು ಗುಜ್ಜನಡು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎ.ಹೆಚ್.ಪಾಳ್ಯ, ಮುರಾರೆ ಹಳ್ಳಿ ಗ್ರಾಮಗಳಲ್ಲಿ ಮೇಲುತೊಟ್ಟಿಗೆ ಬಣ್ಣ ಮಾಡಿರುವುದಿಲ್ಲ, ಮೆಟ್ಟಿಲು ಅಳವಡಿಸಿರುವುದಿಲ್ಲ ಮತ್ತು ನೀರು ಬಿಟ್ಟಿರುವುದಿಲ್ಲ ಎಂದು ಸಭೆಯ ಗಮನಕ್ಕೆ ತರಲಾಗಿ, ತ್ವರಿತವಾಗಿ ಸಮಸ್ಯೆ ಪರಿಹರಿಸುವುದಾಗಿ ಸಂಬಂಧಪಟ್ಟ ಅಧಿಕಾರಿಗಳು ಭರವಸೆಯಿತ್ತರು.

ಕುಡಿಯುವ ನೀರು ನಿರ್ವಹಣೆಯ ಕುರಿತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಈವರೆಗೆ 13ನೇ ಹಣಕಾಸು ಯೋಜನೆಯಡಿ ಗ್ರಾಮ ಪಂಚಾಯತಿಗಳಲ್ಲಿ ನಿರ್ವಹಣೆಗೆ ಅವಕಾಶವಿತ್ತು ಅಲ್ಪ ಸ್ವಲ್ಪ ನಿರ್ವಹಣೆ ಮಾಡಲಾಗುತ್ತಿತ್ತು ಗ್ರಾ.ಪಂ.ಗಳಲ್ಲಿ ನಿರ್ವಹಣೆಗೆ ಅವಕಾಶವಿತ್ತು, ಆದರೆ ದಿನಾಂಕ 16.04.2013ರ ಸುತ್ತೋಲೆ ಮಾರ್ಗಸೂಚಿ ಯನ್ವಯ 13ನೇ ಹಣಕಾಸು ಯೋಜನೆಯ ಅನುದಾನಕ್ಕೆ ನಿರ್ಧಿಷ್ಟ ಮಾರ್ಗಸೂಚಿ ಇರುವುದರಿಂದ ನೀರು ನಿರ್ವಹಣೆಗೆ ಅವಕಾಶವಿಲ್ಲವಾದ್ದರಿಂದ ಪಂಚಾಯಿತಿಗಳಲ್ಲಿ ಸಮಸ್ಯೆಯಾಗಿದೆ, ಆದರೂ ಗ್ರಾಮ ಪಂಚಾಯಿತಿಗಳ ಕರವಸೂಲಿ ಹಣದಲ್ಲಿ ತುರ್ತು ಅಗತ್ಯವಿದ್ದೆಡೆ ಮಾಡುತ್ತಿದ್ದೇವೆ ಎಂದು ತಿಳಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಕೆಲವೆಡೆ ವಿದ್ಯುತ್ ಇದ್ದು, ನೀರು ತುಂಬಿ ಹರಿಯುತ್ತಿರುವುದನ್ನು ಗಮನಿಸಲಾಗಿದೆ; ಕಾರ್ಯನಿರ್ವಾಹಕ ಅಧಿಕಾರಿಗಳು, ಪಿ.ಡಿ.ಓ.ಗಳಿಗೆ ಸಭೆಗಳಲ್ಲಿ ಸೂಚನೆ ನೀಡಿ ಮೇಲುತೊಟ್ಟಿ, ಚರಂಡಿ ನಿರ್ವಹಣೆಯಂತಹ ಕಾಮಗಾರಿ ಕೈಗೆತ್ತಿಕೊಂಡು ಆ ಕುರಿತು ನೋಡಲ್ ಅಧಿಕಾರಿಗಳು ಸಹ ತಾಲ್ಲೂಕು ಮಟ್ಟದ ಸಭೆಯಲ್ಲಿ ಚರ್ಚಿಸಿ ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಆಂಜಿನಪ್ಪನವರು ಮಾತನಾಡಿ, ಪಾವಗಡ ತಾಲ್ಲೂಕು ವೈ.ಎನ್.ಹೊಸಕೋಟೆ ಗ್ರಾಮದಲ್ಲಿ 20,000 ಜನಸಂಖ್ಯೆ ಇದ್ದು, ನೀರಿಗೆ ಬಹಳಷ್ಟು ಸಮಸ್ಯೆ ಇರುವುದರಿಂದ ಹಾಲಿ ಇರುವ ಹಳೆಯ ಪೈಪ್ ಲೈನ್ ಬದಲಾಯಿಸಿ ಕೊಳವೆಬಾವಿ ಕೊರೆಸಿಕೊಟ್ಟರೆ ಅನುಕೂಲವಾಗುತ್ತದೆ ಎಂದು ತಿಳಿಸಿದರು. ಇದಕ್ಕೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಹಳೆಯ ಪೈಪ್ ಲೈನ್ ಬದಲಾವಣೆಗೆ ಐ.ಎಂ.ಐ.ಎಸ್. ಅಥವಾ ಯಾವುದಾದರೂ ಯೋಜನೆಯಡಿ ಪುನಶ್ಚೇತನಕ್ಕೆ (Regumination) ಅವಕಾಶವಿದ್ದಲ್ಲಿ ಪರಿಶೀಲಿಸಿ ಅಗತ್ಯ ಕ್ರಮವಹಿಸುವಂತೆ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ಮಧುಗಿರಿ ಇವರಿಗೆ ತಿಳಿಸಿದರು.

ನಂತರ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ಉಪವಿಭಾಗ, ಮಧುಗಿರಿ ಇವರು ಮಾತನಾಡಿ, ಮಧುಗಿರಿ ತಾಲ್ಲೂಕು ವ್ಯಾಪ್ತಿಯ ಏಳು ಗ್ರಾಮಗಳಲ್ಲಿ ಸೋಮೇಹಳ್ಳಿ, ಕಡಗತ್ತೂರು, ಮಾರೇಹಳ್ಳಿ, ದಬ್ಬೇಘಟ್ಟ, ರೆಡ್ಡಿಹಳ್ಳಿ, ಭರಣಿ, ಬಸವನಹಳ್ಳಿ ಗೊಲ್ಲರಹಟ್ಟಿ ಕುಡಿಯುವ ನೀರಿಗೆ ತೀವ್ರ ತೊಂದರೆಯಿದ್ದು, ಆ ಗ್ರಾಮಗಳಿಗೆ ಟ್ಯಾಂಕರ್ ಮೂಲಕ ನೀರು ಒದಗಿಸಲಾಗುತ್ತಿದೆ, ಬೋರ್ ವೆಲ್ ಪಾಯಿಂಟ್ ಮಾಡಿಸಲಾಗಿದ್ದು 2-3 ದಿನಗಳಲ್ಲಿ ಬೋರ್ ವೆಲ್ ಕೊರೆಸಿ ನೀರು ಕೊಡಲು ವ್ಯವಸ್ಥೆ ಮಾಡಲಾಗುವುದು ಎಂದು ಸಭೆಯ ಗಮನಕ್ಕೆ ತಂದರು. ಮಾನ್ಯ ಸದಸ್ಯರಾದ ಶ್ರೀಮತಿ ಶಾಂತಲಾ ರಾಜಣ್ಣನವರು ಮಾತನಾಡಿ, ಮೇಲ್ಕಂಡ ಗ್ರಾಮಗಳಲ್ಲಿ ನೀರಿಗೆ ವ್ಯವಸ್ಥೆಗೊಳಿಸಿಕೊಟ್ಟಿರುವುದಾಗಿ ಸಭೆಯ ಗಮನಕ್ಕೆ ತಂದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಕೊಳವೆಬಾವಿ ಮರುಪೂರಣಕ್ಕೆ ಮಳೆ ಕೊಯ್ಲಿಗೆ ಹಳೆ ಎಸ್.ಆರ್. ಪ್ರಕಾರ ರೂ. 21,000/- ಖರ್ಚಾಗುತ್ತಿದ್ದು, ಎಸ್.ಆರ್. ದರ ಪರಿಷ್ಕರಿಸಿ ರೂ. 25-30 ಸಾವಿರ ವೆಚ್ಚದಲ್ಲಿ ಪ್ರತಿ ಕೊಳವೆಬಾವಿಗೆ ರೀಚಾರ್ಜ್ ಸ್ಟ್ರಕ್ಚರ್ ಮಾಡಿದರೆ (MGNEGA ಅಡಿ ಭರಿಸಿ) ಅನುಕೂಲವಾಗುತ್ತದೆ, ಆದ್ದರಿಂದ ಈ ಬಗ್ಗೆ ಯುನಿಟ್ ಚಾರ್ಜ್ ವರ್ಕ್‌ಔಟ್ ಮಾಡಲು ಎರಡೂ ವಿಭಾಗಗಳ

ಕಾರ್ಯಪಾಲಕ ಇಂಜಿನಿಯರ್ ಗಳಿಗೆ ಸೂಚಿಸಿದರು. ಈ ದಿಸೆಯಲ್ಲಿ ಜಿಲ್ಲಾ ಪಂಚಾಯತ್ ಮಾನ್ಯ ಸದಸ್ಯರುಗಳು ಸಹಕರಿಸಬೇಕು ಎಂದು ಕೋರಿದರು. ಪ್ರತಿಯಾಗಿ ಮಾನ್ಯ ಸದಸ್ಯರಾದ ಶ್ರೀಮತಿ ಶಾಂತಲಾ ರಾಜಣ್ಣನವರು ಮಾತನಾಡಿ, ರೀ ಚಾರ್ಜ್ ಗೆ ರೂ. 25,000/- ಸಾಕಾಗುವುದಿಲ್ಲವೆಂದು ತಿಳಿಸಿದ ಮೇರೆಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಪ್ರಸ್ತುತ ಪರಿಷ್ಕೃತ ಎಸ್.ಆರ್. ದರದಂತೆ ಅಂದಾಜು ವೆಚ್ಚಭರಿಸಬಹುದಾಗಿ ತಿಳಿಸಿದರು. ಮುಂದುವರಿದು ಮಾತನಾಡುತ್ತಾ, ಈ ಬಗ್ಗೆ ಯಾರಾದರೂ ವೈಯಕ್ತಿಕ ಆಸಕ್ತಿವಹಿಸಿ, ಪ್ರತಿ ಗ್ರಾ.ಪಂ.ಗೆ ಕನಿಷ್ಠ 20ರಂತೆ ಕೊಳವೆಬಾವಿ ಗಳನ್ನು ಆಯ್ಕೆಮಾಡಿಕೊಂಡು ಶೇ.100ರಷ್ಟು ಸಫಲತೆ ಪಡೆಯೋಣ ಅದಲ್ಲದೆ (Recharge-100% & Roof Top Harvesting), ಕಾರ್ಯಕ್ರಮಗಳ ಬಗ್ಗೆಯೂ ಅಂದಾಜು ತಯಾರಿಸಿ ಪಂಚಾಯತಿಗೆ ನೀಡಲು ಸೂಚಿಸಿದರು.

ಇದಕ್ಕೆ ಪೂರಕವಾಗಿ ಮಾನ್ಯ ಸದಸ್ಯರಾದ ಡಾ: ರವಿಯವರು ಮಾತನಾಡಿ, ಹಣ ನೀಡಲು ಜಿಲ್ಲಾ ಪಂಚಾಯಿತಿ ಸಿದ್ಧವಿದ್ದಲ್ಲಿ ಪ್ರತಿ ಸದಸ್ಯರು ತಲಾ ಒಂದರಂತೆ ಎಲ್ಲಾ ತಾಲ್ಲೂಕುಗಳಲ್ಲಿ ಗ್ರಾಮ ಪಂಚಾಯಿತಿಗಳನ್ನು ಆಯ್ಕೆಗೊಳಿಸಿಕೊಡುವುದಾಗಿ ಸಭೆಗೆ ತಿಳಿಸಿದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ಬಡೀರಣ್ಣನವರು ಮಾತನಾಡಿ, ಕೊಳವೆಬಾವಿ ವಿಫಲವಾದಲ್ಲಿ ಬದಲೀ ಕೊಳವೆಬಾವಿ ಕೊರೆಸಲು ಸಂಬಂಧಪಟ್ಟ ಗ್ರಾಮ ಪಂಚಾಯಿತಿಯವರು ಸ್ಥಳ ಪರಿಶೀಲಿಸಿ ಪ್ರಮಾಣೀಕರಿಸಿ ವರದಿ ನೀಡಿದರೆ ಬೇರೊಂದು ಕೊಳವೆಬಾವಿ ಕೊರೆಸಬಹುದು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ಪ್ರಸನ್ನಕುಮಾರ್ ರವರು ಮಾತನಾಡಿ, ಕೆಟ್ಟು ಹೋದ ಪಂಪು ಮೋಟಾರ್ ಗೆ ಬಗ್ಗೆ ಕಂಪ್ಯೂಟರ್ ನಲ್ಲಿ ಮಾಹಿತಿ ಅಳವಡಿಸಲು ಕ್ರಮವಹಿಸುವಂತೆ ಕಾರ್ಯನಿರ್ವಾಹಕ ಅಧಿಕಾರಿಯವರು ತಮ್ಮ-ತಮ್ಮ ತಾಲ್ಲೂಕುಗಳ ವ್ಯಾಪ್ತಿಯ ಗ್ರಾಮ ಪಂಚಾಯಿತಿ ಪಿ.ಡಿ.ಓ/ ಕಾರ್ಯದರ್ಶಿಯವರುಗಳಿಗೆ ಸೂಕ್ತ ಸೂಚನೆ ನೀಡಬೇಕಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ಪಂಚಾಕ್ಷರಿಯವರು ಮಾತನಾಡಿ, ತಮ್ಮ ಕ್ಷೇತ್ರ ವ್ಯಾಪ್ತಿಯ ಸೋಮನಹಳ್ಳಿಗ್ರಾಮದ ಮೇಲುತೊಟ್ಟಿಯು ಲೀಕೇಜ್ ಆಗುತ್ತಿದ್ದು, ಅದನ್ನು ಸುಸ್ಥಿತಿಗೊಳಿಸಲು ಅಧಿಕಾರಿಗಳು ಈವರೆವಿಗೂ ಯಾವುದೇ ಕ್ರಮವಹಿಸಿ ರುವುದಿಲ್ಲ ಎಂದು ಸಭೆಗೆ ತಿಳಿಸಿದರು. ಪ್ರತಿಯಾಗಿ ಕೂಡಲೇ ಕ್ರಮವಹಿಸಿ ಸಮಸ್ಯೆಯನ್ನು ತ್ವರಿತವಾಗಿ ಬಗೆಹರಿಸಿಕೊಡುವಂತೆ ಸಂಬಂಧಪಟ್ಟ ಕಾರ್ಯಪಾಲಕ ಇಂಜಿನಿಯರ್ ರವರಿಗೆ ತಿಳಿಸಿದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀಮತಿ ಲೋಹಿತಾಬಾಯಿಯವರು ಮಾತನಾಡಿ, ಚಿ.ನಾ.ಹಳ್ಳಿ ತಾಲ್ಲೂಕಿನ ಮಾಳಿಗೆಹಳ್ಳಿ, ಜೋಡಿಕಲ್ಲಹಳ್ಳಿ, ಆಲಗೊಳ, ಶೆಟ್ಟಿಕೆರೆ, ಚಿಮ್ಮನಹಳ್ಳಿ ಗ್ರಾಮಗಳಲ್ಲಿ ನೀರಿಗೆ ತೊಂದರೆಯಿರುವುದಾಗಿ ಸಭೆಗೆ ತಿಳಿಸಲಾಗಿ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಚಿ.ನಾ.ಹಳ್ಳಿ ಇವರು ಮಾತನಾಡಿ, ಮೇಲ್ಕಂಡ ಗ್ರಾಮಗಳಿಗೆ ಟ್ಯಾಂಕರ್ ಮೂಲಕ ನೀರು ಒದಗಿಸಲು ವ್ಯವಸ್ಥೆ ಕಲ್ಪಿಸಿರುವುದಾಗಿ ಸಭೆಗೆ ತಿಳಿಸಿದರು.

ಸಭೆಯ ಮಾನ್ಯ ಅಧ್ಯಕ್ಷರು ಮಾತನಾಡಿ, ನೀರಿನ ಟ್ಯಾಂಕ್ ಗಳಲ್ಲಿ ಕೊಳೆ ಪಾಚಿ ಇರುವೆಡೆ ಗಮನಿಸಿ ಎರಡು ದಿನಗಳಲ್ಲಿ ಶುಚಿಗೊಳಿಸಲು ತುರ್ತು ಅಗತ್ಯ ಕ್ರಮವಹಿಸುವಂತೆ ಪಿ.ಡಿ.ಓ.ಗಳಿಗೆ ಸೂಚಿಸಲು ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ತಿಳಿಸಿದರು.ಜಿ.ಪಂ.ನ ಮಾನ್ಯ ಉಪಾಧ್ಯಕ್ಷರು ಮಾತನಾಡಿ, ತಮ್ಮ ಕ್ಷೇತ್ರ ವ್ಯಾಪ್ತಿಯ ಶಿವಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಶೆಟ್ಟಿಹಳ್ಳಿ, ಎಳದಾಸರಪುರ ಗ್ರಾಮಗಳಲ್ಲಿ ಮೂರು ಕೊಳವೆಬಾವಿಗಳನ್ನು

ಕೊರೆದು ಈ ಪೈಕಿ ಎರಡು ಕೊಳವೆಬಾವಿಗಳು ವಿಫಲಗೊಂಡಿರುತ್ತವೆ, ಕೆಲವು ಗ್ರಾಮಗಳಲ್ಲಿ ಕೊಳವೆಬಾವಿಕೊರೆದು, ಟಿ.ಸಿ. ಅಳವಡಿ ಸಿದ್ದ,ಕೊಳವೆಬಾವಿಯಲ್ಲಿ ನೀರಿದ್ದರೂ ಸಹ ಗ್ರಾಮಸ್ಥರಿಗೆ ನೀರಿಗೆ ತೊಂದರೆಯಾಗಿ ರುತ್ತದೆ, ಅಳಿಲಘಟ್ಟ ಗ್ರಾಮದ ಶಾಲೆಯಲ್ಲಿ ನೀರಿನ ಸೌಕರ್ಯವಿರುವುದಿಲ್ಲ ಎಂದು ಸಭೆಗೆ ತಿಳಿಸಿದರು. ಸಭೆಯ ಮಾನ್ಯ ಅಧ್ಯಕ್ಷರು ಮಾತನಾಡಿ, ಈ ಬಗ್ಗೆ ಪರಿಶೀಲಿಸಿ ಆದಷ್ಟು ಬೇಗ ಸಮಸ್ಯೆ ಬಗೆಹರಿಸಿಕೊಡುವಂತೆ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ತುಮಕೂರು ಇವರಿಗೆ ತಿಳಿಸಿದರು.

ಮಾನ್ಯ ಸದಸ್ಯರಾದ ಡಾ: ರವಿಯವರು ಮಾತನಾಡಿ, ಹುಲಿಯೂರುದುರ್ಗಕ್ಕೆ ಜಾತ್ರೆಯ ಸಂದರ್ಭದಲ್ಲಿ ಮಾರ್ಕೋನಹಳ್ಳಿ ಜಲಾಶಯದ ಗೇಟ್ ಮುಖೇನ ನೀರು ಹರಿಸಿ ವ್ಯವಸ್ಥೆ ಕಲ್ಪಿಸಲಾಗಿರುತ್ತದೆ ಶಿಂಷಾ ನದಿಗೆ ತಡೆ-ಅಣೆ ನಿರ್ಮಾಣ ಮಾಡಿದರೆ 4-5 ತಿಂಗಳಿಗೆ ಶಾಶ್ವತ ಪರಿಹಾರ ದೊರಕುತ್ತದೆ, ಅದರಂತೆ DPR & OPR ಮಾಡಿದರೆ ಅನುಕೂಲವಾಗುತ್ತದೆ ಎಂದು ಸಭೆಗೆ ತಿಳಿಸಿದರು. ಪ್ರತಿಯಾಗಿ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಬಾಗ, ತುಮಕೂರು ಇವರು ಮಾತನಾಡಿ, ಕುಣಿಗಲ್ ತಾಲ್ಲೂಕಿನ ಹುತ್ರಿದುರ್ಗ ಮತ್ತು ಇತರೆ 88 ಗ್ರಾಮಗಳಿಗೆ DPR & OPR ಸಿದ್ಧಪಡಿಸಿ ಅನುಮೋದನೆಗಾಗಿ ಸರ್ಕಾರಕ್ಕೆ ಕಳುಹಿಸಲಾಗಿದೆ, ಅನುಮೋದನೆಗೊಂಡು ಬಂದಕೂಡಲೇ ಕಾರ್ಯೋನ್ಮುಖರಾಗುತ್ತೇವೆ ಎಂದು ಸಭೆಗೆ ತಿಳಿಸಿದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ಶಿವಣ್ಣನವರು ಮಾತನಾಡಿ, ಮಾವಿನಕಟ್ಟೆಪಾಳ್ಯ, ಬಸವಮತ್ತಿಕೆರೆ, ಕೆಂಕೆರೆ ಗ್ರಾಮಗಳ ಮೇಲುತೊಟ್ಟಿ ಕೆಲಸವಾಗಿಲ್ಲವೆಂದು ಸಭೆಯ ಗಮನಕ್ಕೆ ತಂದರು. ಪ್ರತಿಯಾಗಿ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ತುಮಕೂರು ಇವರು ಮಾತನಾಡಿ, ಮೇಲ್ಕಂಡ ಕಾಮಗಾರಿಗಳಿಗೆ ಸಂಬಂಧಿಸಿದಂತೆ KRIDLನವರಿಗೆ ಕಾರ್ಯಾದೇಶ ನೀಡಿ ಕಾಮಗಾರಿ ವಹಿಸಿರುವುದಾಗಿ ಸಭೆಗೆ ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಆನಂದ ರವಿ ಯವರು ಮಾತನಾಡಿ, ಶಾಂತಿಗ್ರಾಮದಲ್ಲಿ ಕೊಳವೆಬಾಬಿ ಕೊರೆದರೂ ನೀರು ಬಿದ್ದಿಲ್ಲ. ಕರದಾಳು ಗ್ರಾಮದ ಮೇಲುತೊಟ್ಟಿ ಕಾಮಗಾರಿ ಪೂರ್ಣಗೊಂಡಿರುವುದಿಲ್ಲ, ಗುಂಗುರುಮೆಳೆ ಗ್ರಾಮದಲ್ಲಿ ಕೊಳವೆಬಾವಿ ಕೊರೆದರೂ ಆರು ತಿಂಗಳಾದರೂ ಮೋಟರ್ ಅಳವಡಿಸಿಲ್ಲ- ಸರ್ವೀಸ್ ನೀಡಿಲ್ಲ- ನೀರು ಹರಿಸಿಲ್ಲ ಈ ಸಮಸ್ಯೆಯನ್ನು ಬಗೆಹರಿಸಿಕೊಡಿ ಎಂದು ಒತ್ತಾಯಿಸಿದರು. ಪ್ರತಿಯಾಗಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರು ಮಾತನಾಡಿ, 4-5 ದಿನಗಳಲ್ಲಿ ಸಮಸ್ಯೆ ಬಗೆಹರಿಸಿಕೊಡುವುದಾಗಿ ಭರವಸೆಯಿತ್ತರು.

ಮುಂದುವರಿದು ಮಾತನಾಡುತ್ತಾ, ತಿಪಟೂರು ತಾಲ್ಲೂಕು ಪಂಚಾಯಿತಿಯಲ್ಲಿ ಕಾರ್ಯನಿರ್ವಾಹಕ ಅಧಿಕಾರಿಯವರು ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನ ಬಿಟ್ಟರೆ ಈ ವರೆಗೆ ಸರಿಯಾದ ವೇಳೆಗೆ ಮತ್ತು ಪ್ರತಿದಿನ ಕಛೇರಿಗೆ ಹಾಜರಾಗುವುದಿಲ್ಲ ಹಾಗೆಯೇ ಇಂದು ಜಿಲ್ಲಾ ಪಂಚಾಯತ್ ನಲ್ಲಿ ಸಭೆ ಇದ್ದರೂ ಸಭೆಗೂ ಬಂದಿಲ್ಲ, ಹೀಗಾದಲ್ಲಿ ಗ್ರಾಮ ಪಂಚಾಯಿತಿಗಳ ಸಮಸ್ಯೆಗಳನ್ನು ಯಾರಲ್ಲಿ ಪ್ರಸ್ತಾಪಿಸಬೇಕು ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಪ್ರತಿಯಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ನೀರಿನ ಸಮಸ್ಯೆಯ ಕುರಿತು ತಾಲ್ಲೂಕಿನ ನೋಡಲ್ ಅಧಿಕಾರಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕಾರ್ಯಪಾಲಕ ಇಂಜಿನಿಯರ್ ಎಲ್ಲರೂ ಸೇರಿ ಅಸೆಸ್ ಮಾಡಬೇಕು ಎಂದು ತಿಳಿಸಿ, ಇನ್ನು ಉಳಿದಂತೆ ನಿಯೋಜಿತ

ಅಧಿಕಾರಿಯ regulariseಗೆ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು ಅಥವಾ ಬೇರೊಬ್ಬ ಅಧಿಕಾರಿಯನ್ನು ನೇಮಿಸುವಂತೆ ಸರ್ಕಾರಕ್ಕೆ ಕೋರಲಾಗುವುದು.

ಮಾನ್ಯ ಸದಸ್ಯರಾದ ಶ್ರೀ ಉಗ್ರಯ್ಯನವರು ಮಾತನಾಡಿ, IMIS & scarecity ಅಡಿ pump & motor ಗಳನ್ನು ತಾಲ್ಲೂಕು ಪಂಚಾಯಿತಿಗೆ replace ಮಾಡಿದ್ದರೂ ಸಹ ತಾ.ಪಂ.ನವರು ಹಸ್ತಾಂತರಿಸಿಕೊಳ್ಳದೆ ಸತಾಯಿಸುತ್ತಾರೆ. ಕೊಡಗಿಹಳ್ಳಿ ಪಂಚಾಯಿತಿಯದು ಸಹ ಇದೇ ಸ್ಥಿತಿ ಇದೆ ಎಂದಾಗ ಹಸ್ತಾಂತರ ಮಾಡಿಸಿಕೊಳ್ಳಲು ಕ್ರಮ ವಹಿಸಲು ಕಾರ್ಯನಿರ್ವಾಹಕ ಅಧಿಕಾರಿಯವರು ತಿಳಿಸಿದ್ದಾರೆ ಎಂದು ಸಭೆಯ ಗಮನಕ್ಕೆ ತಂದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀಮತಿ ನಾಗಮ್ಮನವರು ಮಾತನಾಡಿ, ತಮ್ಮ ಕ್ಷೇತ್ರ ವ್ಯಾಪ್ತಿಯ ವೀರಸಾಗರ ಮತ್ತು ಕೋಡಿಪಾಳ್ಯ ಗ್ರಾಮಗಳಲ್ಲಿ ಸಿಸ್ಟನ್ ಗಳನ್ನು ಶುಚಿಗೊಳಿಸಿಕೊಡುವಂತೆ ಕೋರಿದರು. ಪ್ರತಿಯಾಗಿ ಕಾರ್ಯನಿರ್ವಾಹಕ ಅಧಿಕಾರಿ ಯವರು ಮಾತನಾಡಿ, ತ್ವರಿತವಾಗಿ ಶುಚಿಗೊಳಿಸಿ ಕೊಡಲಾಗುವುದು ಎಂದು ಸಭೆಗೆ ತಿಳಿಸಿದರು.

ಜಿ.ಪಂ. ಮಾನ್ಯ ಸದಸ್ಯರಾದ ಶ್ರೀ ವೈ.ಹೆಚ್.ಹುಚ್ಚಯ್ಯನವರು ಮಾತನಾಡಿ, ಕುಡಿಯುವ ನೀರಿಗೆ ಸರ್ಕಾರ ನೀಡಿರುವ ಅನುದಾನವನ್ನು ನಿರ್ವಹಣೆ ಮಾಡುವಲ್ಲಿ ಜಿಲ್ಲಾ ಪಂಚಾಯತಿ ಎಡವಿದೆ; ಯೋಜನೆಯ ಅನುಷ್ಠಾನ ಕುರಿತು ತಾಲ್ಲೂಕು ಮತ್ತು ಗ್ರಾಮ ಪಂಚಾಯತಿಗಳು ಸರಿಯಾದ ರೀತಿಯಲ್ಲಿ ನಿಗಾ ವಹಿಸದಿದ್ದರೆ ಅನುದಾನ ವ್ಯರ್ಥವಾಗುತ್ತದೆ; ಕುಣಿಗಲ್ ತಾಲ್ಲೂಕು ಸೋಮದೇವನ ಪಾಳ್ಯ ಗ್ರಾ.ಪಂ. ವ್ಯಾಪ್ತಿಯಲ್ಲಿ ಎರಡು ಕೊಳವೆ ಬಾವಿಗಳನ್ನು ಕೊರೆದು ಸರ್ಕಾರದ ಹಣವನ್ನು ಪೋಲು ಮಾಡಲಾಗಿದೆ; ಗ್ರಾ.ಪಂ.ಗಳಲ್ಲಿ ಪಿ.ಡಿ.ಓ.ಗಳು ಕಛೇರಿ ವೇಳೆಗಳಲ್ಲಿ ಸಿಗದಿರುವುದರಿಂದ ಜನರು ಸಮಸ್ಯೆಗಳನ್ನು ಹೇಳಿಕೊಳ್ಳಲು ಚುನಾಯಿತ ಪ್ರತಿನಿಧಿಗಳ ಬಳಿ ಬರುವಂತಾಗಿದೆ ಎಂದು ಸಭೆಗೆ ತಿಳಿಸಿದರು.

ಜಿ.ಪಂ. ಮಾನ್ಯ ಸದಸ್ಯರಾದ ಡಾ:ರವಿ ಯವರು ಮಾತನಾಡಿ, ಕ್ರಿಯಾ ಯೋಜನೆಯನ್ವಯ ಕಾಮಗಾರಿ ಅನುಷ್ಠಾನಕ್ಕಾಗಿ ಸರ್ಕಾರದಿಂದ ಬಿಡುಗಡೆಯಾಗುವ ಅನುದಾನ ಸದ್ಬಳಕೆಯಾಗುತ್ತಿಲ್ಲ. 2011-12ನೇ ಸಾಲಿನ ಕ್ರಿಯಾ ಯೋಜನೆಯಂತೆ ಒಟ್ಟು 355 ಕೋಟಿ ರೂ. ಹಣ ಬಿಡುಗಡೆಯಾಗಿದ್ದು ಈ ಪೈಕಿ ಎಷ್ಟು ಹಣ ಖರ್ಚಾಗಿದೆ ಎಂಬ ಬಗ್ಗೆ ಮಾಹಿತಿ ನೀಡಬೇಕು. ಹಾಗೂ ಜಿಲ್ಲೆಯ 321 ಗ್ರಾ.ಪಂ.ಗಳಲ್ಲಿ ಎಷ್ಟು ಮಂದಿ ನೌಕರರಿದ್ದಾರೆ, ಪಂಚಾಯತಿ ನಿರ್ವಹಣೆ ಹೇಗಿದೆ? ಎಂಬ ಬಗ್ಗೆ ಮಾಹಿತಿ ಒದಗಿಸಬೇಕು ಎಂದು ಕೋರಿದರು.

ಸಭೆಯ ಮಾನ್ಯ ಅಧ್ಯಕ್ಷರು ಮಾತನಾಡಿ, ಜಿಲ್ಲೆಯ ಕುಡಿಯುವ ನೀರಿನ ಸಮಸ್ಯೆ ಕುರಿತು ಚರ್ಚಿಸಲು ಜಿಲ್ಲಾ ಪಂಚಾಯತಿಗಳ ಅಧ್ಯಕ್ಷರನ್ನು ಒಳಗೊಂಡ ನಿಯೋಗವು ಇದೇ ಜೂನ್ 25ರಂದು ಮಾನ್ಯ ಮುಖ್ಯ ಮಂತ್ರಿಯವರನ್ನು ಭೇಟಿ ಮಾಡಲಿದ್ದು, ಸದರಿ ಸಂದರ್ಭದಲ್ಲಿ ಜಿಲ್ಲೆಯಲ್ಲಿನ ಕುಡಿಯುವ ನೀರಿನ ಸಮಸ್ಯೆಯ ಕುರಿತು ಮಾನ್ಯ ಮುಖ್ಯ ಮಂತ್ರಿಯವರಿಗೆ ಮನವರಿಕೆ ಮಾಡಿಸಿ ಹೆಚ್ಚಿನ ಅನುದಾನ ಕೋರಲಾಗುವುದು ಎಂದು ಸಭೆಗೆ ತಿಳಿಸಿದರು.

**(ಕ್ರಮ : ಉಪಕಾರ್ಯದರ್ಶಿ(ಅಭಿ), ಕಾ.ಪಂ.ಇಂ., ಪಂ.ರಾ.ಇಂ.ವಿಭಾಗ, ತುಮಕೂರು/ಮಧುಗಿರಿ ಹಾಗೂ ಜಿಲ್ಲೆಯ ಎಲ್ಲ ಕಾರ್ಯನಿರ್ವಾಹಕ ಅಧಿಕಾರಿಗಳು)**

**ವಿಷಯ ಸಂಖ್ಯೆ.2 :- 2013-14ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯನ್ನು ಅನುಮೋದಿಸುವ ಬಗ್ಗೆ:-**

ಮಾನ್ಯ ಮುಖ್ಯ ಕಾರ್ಯನಿರ್ವಾಹಕಅಧಿಕಾರಿಯವರು ಮಾತನಾಡಿ, 2013-14ನೇ ಸಾಲಿಗೆ ಸಂಬಂಧಿಸಿದಂತೆ, ಒಟ್ಟಾರೆ ಜಿಲ್ಲಾ ಪಂಚಾಯತ್ ಯೋಜನಾ ಕಾರ್ಯಕ್ರಮಗಳಿಗೆ ನಿಗಧಿಯಾಗಿರುವ 11,785.32 ಲಕ್ಷ ರೂ.ಗಳ ಮೊತ್ತದಲ್ಲಿ (ಲೆಕ್ಕ ಶೀರ್ಷಿಕೆ 3054ರಲ್ಲಿನ 613.22 ಲಕ್ಷ ರೂ.ಗಳನ್ನು ಹೊರತುಪಡಿಸಿ) 11,172.10 ಲಕ್ಷ ರೂ.ಗಳ ಮೊತ್ತಕ್ಕೆ ಹಾಗೂ ಯೋಜನೇತರ ಕಾರ್ಯಕ್ರಮಗಳಿಗೆ ನಿಗಧಿಯಾಗಿರುವ 20,835.24ಲಕ್ಷ ರೂ.ಗಳ ಮೊತ್ತದಲ್ಲಿ (ಲೆಕ್ಕ ಶೀರ್ಷಿಕೆ 2702 ಸಣ್ಣ ನೀರಾವರಿ ಮೊತ್ತ 166.89ಲಕ್ಷ ರೂ.ಗಳನ್ನು ಹೊರತುಪಡಿಸಿ) 20,668.35ಲಕ್ಷ ರೂ.ಗಳ ಮೊತ್ತಕ್ಕೆ ಇಲಾಖಾವಾರು ಕ್ರಿಯಾ ಯೋಜನೆಯನ್ನು ತಯಾರಿಸಲಾಗಿದ್ದು, ಪ್ರಸ್ತುತ ಅನುಮೋದನೆಗಾಗಿ ಈ ಸಭೆಗೆ ಮಂಡಿಸಲಾಗಿದೆ ಎಂದು ವಿವರಿಸಿದಾಗ ಅನುಮೋದನೆ ನೀಡಲಾಯಿತು. ಹಾಗೂ ಜಿ.ಪಂ.ಉಳಿದ ಕಾರ್ಯಕ್ರಮಗಳಿಗೆ ಅಂದರೆ 3054,2702,4702, 13ನೇ ಹಣಕಾಸು ರಸ್ತೆ ಕಾರ್ಯಕ್ರಮ, 13ನೇ ಹಣಕಾಸು ನಾಗರೀಕ ಸೌಲಭ್ಯ ಹಾಗೂ ಜಿ.ಪಂ.ಅಭಿವೃದ್ಧಿ ಅನುದಾನ ಕಾರ್ಯಕ್ರಮಗಳಿಗೆ ನಿಗಧಿತ ಅನುದಾನಕ್ಕೆ ಮಾರ್ಗಸೂಚಿ ಪ್ರಕಾರ ಕ್ರಿಯಾಯೋಜನೆ ತಯಾರಿಸಿ ಸರ್ಕಾರಕ್ಕೆ ಸಲ್ಲಿಸಲು ಸಭೆಯಲ್ಲಿ ನಿರ್ಣಯಿಸಲಾಯಿತು.

ಮಧುಗಿರಿ ವಿಧಾನ ಸಭಾ ಕ್ಷೇತ್ರದ ಮಾನ್ಯ ಶಾಸಕರಾದ ಶ್ರೀ ಕೆ.ಎನ್. ರಾಜಣ್ಣನವರು ಮಾತನಾಡಿ, ಕರಡು ಕ್ರಿಯಾ ಯೋಜನೆಯನ್ನು ಗಮನಿಸಲಾಗಿ, ಕೇಂದ್ರ ಸರ್ಕಾರದ ವತಿಯಿಂದ ಹಿಂದೆ ಜಾರಿಗೊಳಿಸಲಾಗಿದ್ದ ಯೋಜನೆಗಳಾದ ಸ್ವಜಲಧಾರಾ, ಸಚೇತನ, ಸ್ವಚ್ಛಗ್ರಾಮ ಯೋಜನೆಗಳು ಹಾಗೂ ಪ್ರಸ್ತುತ ಚಾಲ್ತಿಯಲ್ಲಿರುವ ಸುವರ್ಣ ಗ್ರಾಮೋದಯ ಯೋಜನೆ, 12ನೇ ಹಣಕಾಸು ಯೋಜನೆಗಳ ಸಂಬಂಧ ವಿವಿಧ ಬ್ಯಾಂಕುಗಳಲ್ಲಿ ಕೋಟ್ಯಾಂತರ ರೂಪಾಯಿಗಳ (ಗಳಿಸಿರುವ ಬಡ್ಡಿ ಮೊತ್ತ ಸೇರಿ) ಹಣ ಉಳಿಕೆಯಾಗಿರುತ್ತದೆ. ಆದರೆ ಕೆಲವು ಯೋಜನೆಗಳು ಪ್ರಸ್ತುತ ಚಾಲ್ತಿಯಲ್ಲಿ ಇಲ್ಲದಿರುವುದರಿಂದ ಈ ಬಗ್ಗೆ ತುರ್ತು ತೀರ್ಮಾನ ತೆಗೆದುಕೊಂಡು ಉಳಿಕೆ ಹಣವನ್ನು ಸರ್ಕಾರಕ್ಕೆ ಅಧ್ಯರ್ಪಣೆ ಮಾಡುವ ಬದಲು ದುರಸ್ತಿಗೆ ವೆಚ್ಚ ಭರಿಸಲು ಅವಕಾಶವಿರುವುದರಿಂದ, ಆಯಾ ಯೋಜನೆಗಳಡಿ ಅನುಷ್ಠಾನಗೊಂಡಿರುವ ಕಾಮಗಾರಿಗಳಿಗೆ / ಶಾಲಾ ಕೊಠಡಿಗಳ-ಅಂಗನವಾಡಿ ಕಟ್ಟಡಗಳ ದುರಸ್ತಿಗೆ/ಜಿಲ್ಲಾ ಪಂಚಾಯತ್ ಆಸ್ತಿ ಸೃಜಿಸಲು ಬಳಸಿಕೊಳ್ಳಬಹುದು; ತಾಲ್ಲೂಕು ಪಂಚಾಯತ್ ಉಳಿಕೆಯಡಿ ಕೂಡ ಇದೇ ರೀತಿ ಕ್ರಮವಹಿಸಬಹುದು; ಅನುದಾನ ಬಿಡುಗಡೆ ಮಾಡಿದ ನಂತರ ಕಾಮಗಾರಿಗಳನ್ನು ಉಸ್ತುವಾರಿ ಮಾಡದಿದ್ದರೆ ಪ್ರಯೋಜನವಾಗುವುದಿಲ್ಲ. ಈ ದಿಸೆಯಲ್ಲಿ State fund ಸಂಬಂಧವಾಗಿಯೂ ವರ್ಷವಾರು Statement ಪಡೆದುಕೊಂಡು ಉಳಿಕೆ ಹಣವನ್ನು ಆಯಾ ನಿಗಧಿತ ಉದ್ದೇಶಕ್ಕೆ ಬಳಸಲು ವ್ಯವಸ್ಥೆಗೊಳಿಸಿ ಎಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ತಿಳಿಸಿದರು.

ಮುಖ್ಯ ಲೆಕ್ಕಾಧಿಕಾರಿಗಳು ಮಾತನಾಡಿ, ಬಾಕಿ ಉಳಿದಿರುವ ಬಡ್ಡಿ ಹಣವನ್ನು ಆಯಾಯ ಯೋಜನೆಯ ಮಾರ್ಗಸೂಚಿಯಂತೆ ಯೋಜನೆಗೆ ಬಳಸಬೇಕು ಹಾಗೂ ಚಾಲ್ತಿಯಲ್ಲಿಲದ ಯೋಜನೆಗಳ ಬಡ್ಡಿಯನ್ನು ಸರ್ಕಾರದ ಲೆಕ್ಕಕ್ಕೆ ಜಮಾ ಮಾಡಬೇಕು ಎಂದು ತಿಳಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ವಸತಿ ಯೋಜನೆಗೆ ಸಂಬಂಧಿಸಿದಂತೆ ಅನುಮೋದಿತ ಫಲಾನುಭವಿಗಳ ಪಟ್ಟಿಯನ್ವಯ RGRHCL ನವರು ಹಣವನ್ನು ನೇರವಾಗಿ ಸಂಬಂಧಪಟ್ಟ ಗ್ರಾಮ ಪಂಚಾಯತಿಗಳಿಗೆ ಬಿಡುಗಡೆಗೊಳಿಸುತ್ತಾರೆ; 13ನೇ ಹಣಕಾಸು ಯೋಜನೆಯಡಿ ನಿಗಧಿಯಾಗಿರುವ ಅನುದಾನದಲ್ಲಿ ಶೇ.90ರಷ್ಟನ್ನು ಅಂಗನವಾಡಿ ಕಟ್ಟಡಗಳಿಗೆ ಹಾಗೂ ಶೇ.10ರಷ್ಟನ್ನು ಇತರೆ ಕಾಮಗಾರಿಗಳಿಗೆ ಬಳಕೆ ಮಾಡಬೇಕೆಂದು ಮಾರ್ಗಸೂಚಿ ನಿಯಮ ಇರುತ್ತದೆ; ಈ ನಿಯಮವನ್ನು ಸಡಿಲಗೊಳಿಸಿ ಕುಡಿಯುವ ನೀರಿಗೆ ಅನುವುಮಾಡಿಕೊಡಬೇಕು; ವಿವೇಚನಾ ನಿಧಿಗೆ ಸಂಬಂಧಿಸಿದಂತೆ, ತಾಲ್ಲೂಕು ಪಂಚಾಯತ್ ಅಧ್ಯಕ್ಷರಿಗೆ ರೂ.1.00ಕೋಟಿ

ಜಿಲ್ಲಾ ಪಂಚಾಯತ್ ಅಧ್ಯಕ್ಷರಿಗೆ ರೂ.2.00ಕೋಟಿ ಅಂಗನವಾಡಿ ಕೇಂದ್ರಗಳ ಅಭಿವೃದ್ಧಿಗೆ 10.00ಲಕ್ಷ ಕೊಡಬಹುದು. ಲೆಕ್ಕ ಶೀರ್ಷಿಕೆ 3054ರಲ್ಲಿ ರೂ.6.00ಕೋಟಿ ಅನುದಾನ ಇದ್ದು ಲೆಕ್ಕ ಶೀರ್ಷಿಕೆ 3054ನ್ನು ಬಿಟ್ಟು ಜಿಲ್ಲಾ ಪಂಚಾಯತ್ ನಲ್ಲಿ ಸ್ವಂತ ಕ್ರಿಯಾ ಯೋಜನೆಯನ್ನು ಮಾಡಲು ಕಷ್ಟಸಾಧ್ಯವಾಗುತ್ತದೆ; ಅಧ್ಯಕ್ಷರ ವಿವೇಚನಾ ನಿಧಿಗೆ ಪ್ರಸ್ತಾವನೆ ಗ್ರಾಮ ಸಭೆಗಳಿಂದ ಬರಬೇಕು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಪ್ರಸ್ತಾವನೆಯನ್ನು ಅನುಮೋದಿಸಲು ಅವಕಾಶವಿಲ್ಲ, ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ಗಳಲ್ಲಿಯೂ ಸಹ ಇದೇ ಪರಿಸ್ಥಿತಿ ಇದೆ; ಈ ವಿಷಯಗಳ ಸರ್ಕಾರದಿಂದ ಆದಷ್ಟು ನಿರ್ಭಂದಗಳನ್ನು ಸಡಿಲಗೊಳಿಸಲು ತಮ್ಮ ಶಾಸಕರುಗಳ ಸಹಕಾರ ಬೇಕು ಎಂದು ಮಾನ್ಯ ಶಾಸಕರನ್ನು ಕೋರಿದರು.

ಮಾನ್ಯ ಶಾಸಕರು ಮಾತನಾಡಿ, 6 ತಿಂಗಳವರೆಗೆ ಗ್ರಾಮ ಸಭೆ ನಡೆಸದಿದ್ದಲ್ಲಿ ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಅಧ್ಯಕ್ಷರ ಸ್ಥಾನ ತೆರವುಗೊಳಿಸಬೇಕೆಂದು ಸರ್ಕಾರದ ನಿಯಮಗಳಲ್ಲಿ ತಿಳಿಸಲಾಗಿರುತ್ತದೆ; ಆದರೆ ಅವರುಗಳು ಗ್ರಾಮ ಸಭೆ ಏರ್ಪಡಿಸುವ ಸಂಬಂಧ ಗ್ರಾಮ ಪಂಚಾಯತಿ ಸಿಬ್ಬಂದಿಗೆ (ಪಿ.ಡಿ.ಓ/ಗ್ರಾಮ ಪಂಚಾಯತಿ ಕಾರ್ಯದರ್ಶಿಯವರುಗಳಿಗೆ) ಸೂಚನೆ ನೀಡಿರುತ್ತಾರೆ; ಅವರುಗಳು ಸಭೆ ಕರೆಯದಿದ್ದರೆ ಅಧ್ಯಕ್ಷರುಗಳನ್ನು ಏಕೆ ಅನರ್ಹ ಮಾಡುತ್ತೀರಿ? ಪಿ.ಡಿ.ಓ./ ಗ್ರಾಮ ಪಂಚಾಯತಿ ಕಾರ್ಯದರ್ಶಿಗಳ ಮೇಲೆ ಕ್ರಮವಹಿಸಿ ಎಂದು ತಿಳಿಸಲಾಗಿ, ಆಗ ಸಂಬಂಧಪಟ್ಟ ಗ್ರಾಮ ಪಂಚಾಯತಿ ಅಧ್ಯಕ್ಷರು, ಪಿ.ಡಿ.ಓ. ಕಾರ್ಯದರ್ಶಿಯವರ ಮೇಲೆ ಕ್ರಮ ಕೈಗೊಳ್ಳಲು ನಿಯಮ ತಿದ್ದುಪಡಿ ಮಾಡಲಾಗಿರುತ್ತದೆ, ಆದರೆ ಸದರಿ ತಿದ್ದುಪಡಿ ಇನ್ನೂ ವಿಧಾನ ಪರಿಷತ್ತಿನಲ್ಲಿ ಪಾಸ್ ಆಗಿರುವುದಿಲ್ಲ. ಸರ್ಕಾರದ ಮಟ್ಟದಲ್ಲಿ ಸಾಕಷ್ಟು ಬದಲಾಯಿಸಬೇಕು ಆದರೆ ಗ್ರಾಮಸಭೆ ಬಿಟ್ಟು ಬೇರೆ ರೀತಿ ಮಾಡಲು ಒಪ್ಪುತ್ತಾರೋ? ಇಲ್ಲವೋ? ನೋಡಿ ನೀವೇ ಯೋಜನೆ ಮಾಡಿ ಎಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ತಿಳಿಸಿದರು.

ನಂತರ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಕೊಳವೆಬಾವಿಗಳಲ್ಲಿ ನೀರು ಯಾವಾಗಬೇಕಾದರೂ ಭತ್ತಿ ಹೋಗಬಹುದು ಅನೇಕ ನೀರಿನ ಮೂಲಗಳು (ಬೋರ್ ಮೂಲಗಳು) ಬತ್ತುತ್ತವೆ. ಈಗ ಕ್ರಿಯಾಯೋಜನೆ ಸಿದ್ಧಪಡಿಸಿದ್ದೇವೆ, ಮುಂದಿನ 2-3 ತಿಂಗಳುಗಳಲ್ಲಿ ನೀರಿಗೆ ಏನಾದರೂ ತೊಂದರೆಯಾಯಿತೆಂದರೆ ಕೊಳವೆಬಾವಿಗಳನ್ನು ಕೊರೆಸಲು ಅವಕಾಶವಿರುವುದಿಲ್ಲ; ತುರ್ತು ಅಗತ್ಯವಿರುವೆಡೆಗಳಲ್ಲಿ ತೊಂದರೆಯಾಗುತ್ತದೆ; ಇದಕ್ಕೆ ವಿವೇಚನಾ ನಿಧಿ ಇದ್ದರೆ ಒಳಿತು ಎನಿಸುತ್ತದೆ; ಹಾಗೆಯೇ ಕಾರ್ಯಪಡೆ ಸಮಿತಿಯಲ್ಲಿ ಜಿಲ್ಲಾ ಪಂಚಾಯತ್ ಸದಸ್ಯರುಗಳನ್ನು ಪರಿಗಣಿಸಿದರೆ ಬಹಳಷ್ಟು ಅನುಕೂಲವಾಗುತ್ತದೆ ಎಂಬ ಇಂಗಿತವನ್ನು ವ್ಯಕ್ತಪಡಿಸಿದರು.

ಮಾನ್ಯ ಶಾಸಕರು ಮಾತನಾಡಿ, ವಿವೇಚನಾ ನಿಧಿಗೆ ಸಂಬಂಧಿಸಿದಂತೆ ಸರ್ಕಾರದ ನಿಬಂಧನೆಗಳಿಗೊಳಪಟ್ಟು ವೆಚ್ಚಭರಿಸುವುದಾಗಿ ನಿವೇದಿಸಿ ವಿವೇಚನಾ ನಿಧಿ ಒದಗಿಸಲು ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ತುರ್ತು ಅಗತ್ಯ ಕ್ರಮವಹಿಸುವಂತೆ ತಿಳಿಸಿದರು. ಮುಂದುವರೆದು ಮಾತನಾಡುತ್ತಾ, 13ನೇ ಹಣಕಾಸು ಯೋಜನೆಯ ಅನುದಾನವನ್ನು ಆರೋಗ್ಯ ಇಲಾಖೆಯ ಕಟ್ಟಡಗಳು ಮತ್ತು ಅಂಗನವಾಡಿ, ಶಾಲಾ ಕೊಠಡಿಗಳ ದುರಸ್ಥಿಗೆ ಬಳಕೆ ಮಾಡಿ ಕುಡಿಯುವ ನೀರಿಗೆ ಬೇರೆ ಹಣ ತರಬಹುದು; ಇದೀಗ On-line ಇರುವುದರಿಂದ ಯಾವುದೇ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಂದ ಪತ್ರ ಬರೆಸಿದಲ್ಲಿ ಅನುದಾನ ನೀಡುವುದಾಗಿ Assembly ಯಲ್ಲಿ ನಿರ್ಣಯ ಮಾಡಿದ್ದಾರೆ; ಆದರೆ 13ನೇ ಹಣಕಾಸು ಅನುದಾನವನ್ನು ಕುಡಿಯುವ ನೀರಿಗೆ ಬಳಸುವುದು ಅಸಮಂಜಸ ಎಂದು ಸಭೆಗೆ ತಿಳಿಸಿದರು.

ಉಪ ಕಾರ್ಯದರ್ಶಿ(ಅಭಿವೃದ್ಧಿ) ಯವರು ಮಾತನಾಡಿ, 13ನೇ ಹಣಕಾಸು ಯೋಜನೆಯಡಿ ಪ್ರತಿ ಪಂಚಾಯತಿಗೆ ಕೇವಲ ರೂ.2.00ಲಕ್ಷ ಅನುದಾನ ದೊರಕಲಿದ್ದು ಸದರಿ ಅನುದಾನದಿಂದ ಕಟ್ಟಡ ದುರಸ್ಥಿ ಮಾಡಲು ಸಾಧ್ಯವಾಗುವುದಿಲ್ಲ ಎಂದರು. ಪ್ರತಿಯಾಗಿ ಮಾನ್ಯ ಶಾಸಕರು ಮಾತನಾಡಿ, 13ನೇ ಹಣಕಾಸು ಯೋಜನೆಯಡಿ ಲಭ್ಯವಾಗುವ ಅನುದಾನದಲ್ಲಿ ಇಡೀ ಜಿಲ್ಲೆಯ ಎಲ್ಲಾ ಶಾಲೆಗಳ ಹೆಂಚಿನ ಛಾವಣಿಯನ್ನು ತೆಗೆಸಿ ಒಂದೇ ಮಾದರಿಯಲ್ಲಿ ತಾರಸಿ(Moulding) ಛಾವಣಿ ಹಾಕುಸುವಂತೆ ಸಲಹೆಯಿತ್ತರು.

**( ಕ್ರಮ : ಡಿ.ಡಿ.ಪಿ.ಐ., ಸಾ.ಶಿ.ಇ., ತುಮಕೂರು/ಮಧುಗಿರಿ)**

ಜಿ.ಪಂ. ಮಾನ್ಯ ಸದಸ್ಯರಾದ ಶ್ರೀಮತಿ:ಶಾಂತಲರಾಜಣ್ಣ ನವರು ಮಾತನಾಡಿ, ಜಿ.ಪಂ. ನಿರ್ವಹಣಾ ವೆಚ್ಚದಲ್ಲಿ ವಿಶ್ರಾಂತಿ ಕೊಠಡಿ ನಿರ್ಮಿಸಿ ಸೌಲಭ್ಯ ಒದಗಿಸಲು ಕೋರಿದರು. ಪ್ರತಿಯಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಪ್ರತ್ಯೇಕ ಅಂದಾಜುಪಟ್ಟಿಗಳನ್ನು ಸಲ್ಲಿಸುವಂತೆ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ. ವಿಭಾಗ, ತುಮಕೂರು ಇವರಿಗೆ ಸೂಚಿಸಿದರು.

**(ಕ್ರಮ : ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ತುಮಕೂರು)**

ಮುಂದುವರೆದು ಮಾತನಾಡುತ್ತಾ, 13ನೇ ಹಣಕಾಸು ಯೋಜನೆಯಡಿ ಕಾಮಗಾರಿಗಳನ್ನು ತುಂಡು ಗುತ್ತಿಗೆ ಆಧಾರದಲ್ಲಿ ನಿರ್ವಹಿಸಲು ಅವಕಾಶ ಕಲ್ಪಿಸಬೇಕೆಂದು ಜಿ.ಪಂ.ನ ಮಾನ್ಯ ಸದಸ್ಯರುಗಳು ಒತ್ತಾಯಿಸುತ್ತಿರುವುದಾಗಿ ಮಾನ್ಯ ಶಾಸಕರ ಗಮನಕ್ಕೆ ತಂದರು. ಪ್ರತಿಯಾಗಿ ಶಾಸಕರು ಮಾತನಾಡಿ, ಜಿ.ಪಂ. ಸದಸ್ಯರು ಸಹ ಚುನಾಯಿತ ಪ್ರತಿನಿಧಿಗಳಾಗಿರುವುದರಿಂದ, ಅವರುಗಳ ಗೌರವ ಕಾಪಾಡುವ ನಿಟ್ಟಿನಲ್ಲಿ ತುಂಡು ಗುತ್ತಿಗೆ ಕಾಮಗಾರಿ ನಿರ್ವಹಣೆಗೆ ಅನುಮತಿ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ (ಶಿಫಾರಸು) ಸಲ್ಲಿಸಲು ತಿಳಿಸಿದರು.

**(ಕ್ರಮ : ಉಪಕಾರ್ಯದರ್ಶಿ(ಅಭಿ), ಜಿ.ಪಂ.ತುಮಕೂರು)**

ಜಿ.ಪಂ. ಮಾನ್ಯ ಸದಸ್ಯರಾದ ಡಾ:ರವಿ ಯವರು ಮಾತನಾಡಿ, ಕುಣಿಗಲ್ ತಾಲ್ಲೂಕಿನ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ ಕಛೇರಿಯನ್ನು PWD ಕಛೇರಿ ಆವರಣದಲ್ಲಿ ಖಾಲಿ ಇರುವ ಜಾಗಕ್ಕೆ (PWD Hallಗೆ) ಸ್ಥಳಾಂತರಿಕೊಟ್ಟಲ್ಲಿ ಅಧಿಕಾರಿ/ಸಿಬ್ಬಂದಿಗಳು ವ್ಯವಸ್ಥಿತವಾಗಿ, ಚುರುಕಾಗಿ ಕೆಲಸ ಮಾಡುತ್ತಾರೆ ಎಂದು ಸಭೆಯ ಗಮನಕ್ಕೆ ತಂದರು. ಪ್ರತಿಯಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಪ್ರಸ್ತಾವನೆ ಸಲ್ಲಿಸಿದಲ್ಲಿ ಪರಿಶೀಲಿಸಿ ಸರ್ಕಾರದಿಂದ ಅನುಮತಿ ಪಡೆಯಬಹುದು ಎಂದು ಸಭೆಯಲ್ಲಿ ತಿಳಿಸಿದರು.

**(ಕ್ರಮ : ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ತುಮಕೂರು)**

## MGNREGA

MGNREGA ಗೆ ಸಂಬಂಧಿಸಿದಂತೆ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಕಾರ್ಯ ನಿರ್ವಾಹಕ ಅಧಿಕಾರಿಗಳು ತಮ್ಮ-ತಮ್ಮ ತಾಲ್ಲೂಕು ವ್ಯಾಪ್ತಿಗೆ ಸಂಬಂಧಿಸಿದಂತೆ ಹಾಗೂ ತೋಟಗಾರಿಕೆ/ಕೃಷಿ/ಜಿಲ್ಲಾ ಜಲಾನಯನ/ಸಾಮಾಜಿಕ ಅರಣ್ಯ ಇಲಾಖೆಗಳ ಅಧಿಕಾರಿಗಳು ತಮ್ಮ ಇಲಾಖಾ ವ್ಯಾಪ್ತಿಗೆ ಸಂಬಂಧಿಸಿದಂತೆ ಸಭೆಗೆ ಸವಿವರ ಮಾಹಿತಿ ಒದಗಿಸುವಂತೆ ಸೂಚಿಸಿದರು.

ಅದರಂತೆ, ಜಿಲ್ಲೆಯ ಎಲ್ಲಾ ತಾಲ್ಲೂಕು ಪಂಚಾಯತ್ ಗಳ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ತೋಟಗಾರಿಕೆ/ಕೃಷಿ/ಜಿಲ್ಲಾ ಜಲಾನಯನ/ಸಾಮಾಜಿಕ ಅರಣ್ಯ ಇಲಾಖೆಗಳ ಅಧಿಕಾರಿಗಳು ಮಾತನಾಡಿ, 2012-13ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನ, ಖರ್ಚು, ವರ್ಷಾಂತ್ಯಕ್ಕೆ ಅನುದಾನ

ಉಳಿಕೆ ಹಾಗೂ 2013-14ನೇ ಸಾಲಿಗೆ ಬಿಡುಗಡೆಯಾಗಿರುವ ಅನುದಾನ ಇತ್ಯಾದಿಗಳ ಕುರಿತು ತಾಲ್ಲೂಕುವಾರು ವಿವರವಾದ ಮಾಹಿತಿಗಳನ್ನು ಸಭೆಯ ಗಮನಕ್ಕೆ ತಂದರು.

ಮಾನ್ಯ ಸದಸ್ಯರಾದ ಶ್ರೀ ಕೆಂಚಮಾರಯ್ಯನವರು ಮಾತನಾಡಿ, ಕಳೆದ ಎರಡು ವರ್ಷಗಳ ಹಿಂದೆ ಆಸ್ಪತ್ರೆಯಲ್ಲಿ ಗಿಡ ನಿರ್ವಹಣೆ ಮಾಡಲು ಕೂಲಿಕಾರರಿಗೆ ಅನುಮತಿ ನೀಡಿದ್ದು, MGNREGA ಅಡಿ ಮಾಸಿಕ ರೂ.150.00 ರಂತೆ ಸಂಭಾವನೆ ನೀಡಲು ಅವಕಾಶ ಕಲ್ಪಿಸಿರುತ್ತಾರೆ; ಆದರೆ, ಈ ಸಂಬಂಧ ಸಂಭಾವನೆ ಪಡೆಯಲು ಮಧುಗಿರಿ ತಾಲ್ಲೂಕಿನ ಚಿಕ್ಕದಾಳವಟ್ಟ, ಚಿನ್ನೇನಹಳ್ಳಿ, ಮುದ್ದೇನಹಳ್ಳಿ ಗ್ರಾ.ಪಂ.ಗಳಲ್ಲಿ ಕೂಲಿಕಾರರಿಗೆ ಎರಡು ವರ್ಷಗಳಿಂದಲೂ ಹಾಜರಾತಿ ಪತ್ರ ನೀಡಿರುವುದಿಲ್ಲ; ಒಂದು ವೇಳೆ ಅವರುಗಳು ನ್ಯಾಯಾಲಯದ ಮೊರೆಹೊಕ್ಕರೆ ತಾಲ್ಲೂಕು ಪಂಚಾಯಿತಿಯೇ ಹೊಣೆ ಹೊರಬೇಕಾಗುತ್ತದೆ ಎಂದು ಎಚ್ಚರಿಸಿದರು.

ಸಭೆಯ ಮಾನ್ಯ ಅಧ್ಯಕ್ಷರು ಮಾತನಾಡಿ, ಸಂಬಂಧಪಟ್ಟ ಕೂಲಿಕಾರರ ಕೂಲಿ ಪಾವತಿಗೆ ತುರ್ತು ಅಗತ್ಯ ಕ್ರಮವಹಿಸಿ, ಕ್ರಮದ ಕುರಿತು ಮಾನ್ಯ ಸದಸ್ಯರಿಗೆ ಮಾಹಿತಿ ಒದಗಿಸುವಂತೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಮಧುಗಿರಿ ಇವರಿಗೆ ಸೂಚಿಸಿದರು.

ಸಭೆಯ ಮಾನ್ಯ ಅಧ್ಯಕ್ಷರು ಮಾತನಾಡಿ, ದಿನಾಂಕ:29-05-2013ರಂದು ನಡೆದ ಮಾನ್ಯ ಮುಖ್ಯ ಮಂತ್ರಿಯವರ ಸಭೆಯಲ್ಲಿ ಹಾಳು ಬಾವಿ ಮುಚ್ಚಿಸಲು ಮತ್ತು ಅಂಗನವಾಡಿ ಅಕ್ಕ-ಪಕ್ಕಗಳಲ್ಲಿರುವ ತಿಪ್ಪೆಗುಂಡಿ ಮತ್ತು ಹಳ್ಳಗಳನ್ನು ಮುಚ್ಚಿಸಲು ಹೊಸ ಮಾರ್ಗಸೂಚಿ ಹೊರಡಿಸಲಾಗುವುದೆಂದು ತಿಳಿಸಲಾಗಿತ್ತು ಎಂದು ತಿಳಿಸಿ, ಅದರಂತೆ ಮಾರ್ಗಸೂಚಿ ಬಂದಿದ್ದಲ್ಲಿ ಏನಾದರೂ ಸಿದ್ಧತೆ ಮಾಡಲಾಗುತ್ತಿದೆಯೇ? ಎಂದು ಪ್ರಶ್ನಿಸಿ, ಈ ಕಾಮಗಾರಿಗಳನ್ನು MGNREGA ಅಡಿ ಕೈಗೆತ್ತಿಕೊಂಡರೆ ಒಳ್ಳೆಯದು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಜಿ.ಪಂ. ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು ಮಾತನಾಡಿ, ಒಟ್ಟಾರೆ ಎಂ.ಎನ್.ಆರ್.ಇ.ಜಿ.ಎ. ಯಡಿ ಕ್ರಿಯಾ ಯೋಜನೆಯ ಪ್ರಗತಿ ಸಾಧಿಸಲು ಕಳೆದ ವರ್ಷ ರೂ.32.48 ಕೋಟಿ ಹಣ ಬಾಕಿ ಇದೆ; ಇಷ್ಟು ಅನುದಾನ ಬಾಕಿ ಇದ್ದು ಯಾವ ಭರವಸೆಯ ಮೇಲೆ ಕೂಲಿಕಾರರು ಕೆಲಸ ಮಾಡುತ್ತಾರೆ, ಹಿಂದಿನ ಸಾಲಿನ ಬಾಕಿಯ ಮೇಲೆ ಮುಂದಿನ ಸಾಲಿನ ಪ್ರಗತಿ ಅವಲಂಭಿತವಾಗಿದೆ ಎಂದು ಸಭೆಯ ಗಮನಕ್ಕೆ ತಂದರು.

ಉಪಕಾರ್ಯದರ್ಶಿ (ಅಭಿವೃದ್ಧಿ)ರವರು ಮಾತನಾಡಿ, ಭಾರತ ಸರ್ಕಾರದ ಪಂಚವಾರ್ಷಿಕ ಯೋಜನೆಯಡಿ MGNREGA ಕಾರ್ಯಕ್ರಮವನ್ನು ರೂಪಿಸಿ ಗ್ರಾಮೀಣ ಪ್ರದೇಶದ ಜನರಿಗೆ ಉದ್ಯೋಗ ಸೃಷ್ಠಿಸಿ ಜೀವನೋಪಾಯ ಕಲ್ಪಿಸಲು ಅವಕಾಶ ಮಾಡಿದ್ದಾರೆ; ಈ ಸಂಬಂಧ ಈವರೆಗೆ ಒಬ್ಬ ಕೂಲಿಯೂ ಸಹ ಬಂದು ದೂರು ನೀಡಿಲ್ಲ, ಈಗಲೂ ಪ್ರಾಕ್ಸಿ ಗುತ್ತಿಗೆದಾರರುಗಳನ್ನು ದೂರವಿಡಬೇಕು, ಎಂ.ಐ.ಎಸ್.ಮೂಲಕ ಕೂಲಿ ಪಾವತಿ ಮಾಡಿದರೆ ಗುತ್ತಿಗೆದಾರರನ್ನು ದೂರ ಮಾಡಬಹುದು ಎಂದು ಕೇಂದ್ರಸರ್ಕಾರದಿಂದ ಬೃಹತ್ ಯೋಜನೆ ಮಾಡಿದರೂ ಪ್ರಯೋಜನವಾಗಲಿಲ್ಲ; ಕಳೆದೆರಡು ವರ್ಷಗಳು ಎಂ.ಐ.ಎಸ್. ಹೊರತುಪಡಿಸಿ (Out of MIS) ಕೂಲಿ ಪಾವತಿಸಿದ್ದಾರೆ; ಎಂ.ಐ.ಎಸ್.ನಲ್ಲಿ ರೂ. 18.55 ಕೋಟಿ ಬಾಕಿ ಇರುವುದಾಗಿ ತೋರಿಸುತ್ತದೆ, ಆದರೆ ವಾಸ್ತವದಲ್ಲಿ ಕೇವಲ ರೂ. 53.00 ಲಕ್ಷ ಮಾತ್ರ ಬಾಕಿ ಇದೆ. ಈ ಬಗ್ಗೆ ಎಡಿಟ್ ಆಪ್ಷನ್ (ಕೇಂದ್ರ ಸರ್ಕಾರದಲ್ಲಿ) ಇದ್ದು, ಕಾಮಗಾರಿವಾರು ವಿವರ ಒದಗಿಸಿದ್ದರೂ ಸೇರಿಸಲಾಗಲಿಲ್ಲ, ಆದರೆ ಪ್ರಸ್ತುತ ಎಡಿಟ್ ಆಪ್ಷನ್ ಗೆ ಅವಕಾಶವಿಲ್ಲ; ಬಹುಷ: 2-3 ದಿನಗಳಲ್ಲಿ ಎಡಿಟ್ ಮಾಡಿ (ತಪ್ಪುಮಾಹಿತಿ ತೆಗೆದು) ಹಣ ಭರಿಸಬಹುದು; ಸಾಮಾಗ್ರಿ ಬಿಲ್ ಕೂಡ ನೇರ

ರಾಜ್ಯ ಸರ್ಕಾರದಿಂದ ಖಾತೆಗೆ ಜಮಾವಾಗುತ್ತದೆ ಬರುವ ಹಣವನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಒಪ್ಪಿಗೆ ಮೇರೆಗೆ ಬ್ಯಾಂಕುಗಳಲ್ಲಿ ನಿರ್ವಹಿಸಬೇಕಾಗುತ್ತದೆ; ಇದರಲ್ಲಿ ಮುಂದುವರಿದ ಕಾಮಗಾರಿಗಳ ಪ್ರಶ್ನೆ ಬರುವುದಿಲ್ಲ; ಮುಂದಿನ ವಾರದಲ್ಲಿ ಜಿಲ್ಲೆಗೆ ಹಣ ಬಿಡುಗಡೆಯಾಗಬಹುದು, ಹಣ ಬಂದ ಕೂಡಲೇ ಪಾವತಿಗೆ ಕ್ರಮವಹಿಸಲಾಗುವುದು ಎಂದು ಸಭೆಗೆ ತಿಳಿಸಿದರು.

ಮುಂದುವರಿದು ಮಾತನಾಡುತ್ತಾ, ಜಿಲ್ಲಾ ಜಲಾನಯನ ಇಲಾಖೆಯ ಕಾಮಗಾರಿಗಳಲ್ಲಿ ಮಾರ್ಗ ಸೂಚಿಯ ಪ್ರಕಾರ ಸಾಂಪ್ರದಾಯಿಕ ಕಾರ್ಯಕ್ರಮಗಳನ್ನು ಮಾಡಬೇಕಾಗುತ್ತದೆ; ಸದರಿ ಕಾಮಗಾರಿಗಳಿಗೆ ಬಾಕಿ ಬರಬೇಕಾದ ಅನುದಾನ ರೂ. 29.00ಕೋಟಿ ಹಣವನ್ನು ಸರ್ಕಾರ ನೀಡುತ್ತದೆ ಎಂದು ತಿಳಿಸಿ,ಪಿ.ಡಿ.ಓ.ಗಳು ಮತ್ತು ಡಾಟಾ ಎಂಟ್ರಿ ಆಪರೇಟರ್ ಗಳು ದಿನಂಪ್ರತಿ ಎಂ.ಐ.ಎಸ್.ಮಾಹಿತಿಯನ್ನು ಗಮನಿಸಬೇಕು ಎಂದು ಸೂಚನೆ ನೀಡಿದರು.

ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ಅರೆಹಳ್ಳಿ ರಮೇಶ್ ರವರು ಮಾತನಾಡಿ, ಸಿರಾ ತಾಲ್ಲೂಕಿನ 36 ಗ್ರಾಮ ಪಂಚಾಯಿತಿಗಳಲ್ಲಿ ಕಂಪ್ಯೂಟರ್ ಆಪರೇಟರ್ ಗಳಿಗೆ  ಕಳೆದ 9 ತಿಂಗಳುಗಳಿಂದ MICE ಸಂಸ್ಥೆಯವರು ಸಂಭಾವನೆ ಪಾವತಿ ಮಾಡಿರುವುದಿಲ್ಲ; ಒಟ್ಟು ರೂ.6.60 ಲಕ್ಷ ಮೊತ್ತಕ್ಕೆ ಚೆಕ್ ನೀಡಿರುವುದಾಗಿ 21 ಪಂಚಾಯಿತಿಗಳಿಂದ ಪಿ.ಡಿ.ಓ/ ಗ್ರಾ.ಪಂ.ಕಾರ್ಯದರ್ಶಿಗಳು ವರದಿ ಮಾಡಿರುತ್ತಾರೆ; ಆದರೆ ಈವರೆಗೆ ಸಂಸ್ಥೆಯವರು ಆಪರೇಟರ್ ಗಳಿಗೆ ಸಂಭಾವನೆ ನೀಡಿರುವುದಿಲ್ಲ;  ಆದುದರಿಂದ ನೇರವಾಗಿ ಪಂಚಾಯಿತಿ ಪಿ.ಡಿ.ಓ. ಮೂಲಕ ಸಂಭಾವನೆ ಕೊಡಿಸಲು ವ್ಯವಸ್ಥೆ ಮಾಡಿದರೆ ಒಳ್ಳೆಯದು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಸಿರಾ ಇವರು ಮಾತನಾಡಿ, MICE ಸಂಸ್ಥೆಯವರು 36ಜನಕ್ಕೆ ಬಿಲ್ ಕೊಡುತ್ತಿದ್ದಾರೆ, ಆದರೆ 21 ಗ್ರಾಮ ಪಂಚಾಯಿತಿಗಳಲ್ಲಿ ಮಾತ್ರ ಕಂಪ್ಯೂಟರ್ ಆಪರೇಟರ್ ಗಳು ಕೆಲಸ ಮಾಡುತ್ತಿದ್ದಾರೆ; ಆದುದರಿಂದ 21 ಗ್ರಾಮ ಪಂಚಾಯಿತಿಗಳಿಂದ ಚೆಕ್ ಕಳುಹಿಸಿದರೆ ಸಂಸ್ಥೆಯವರು ಅದನ್ನು reject ಮಾಡಿದ್ದಾರೆ; ಆದರೆ ಯಾವ  ಆಪರೇಟರ್ ಗಳೂ ಸಹ  ನಮ್ಮ ಬಳಿ ಬಂದು ಕೇಳಿಲ್ಲ ಎಂದು ಸಭೆಗೆ ತಿಳಿಸಿದರು.

ಉಪ ಕಾರ್ಯದರ್ಶಿ(ಅಭಿ)ಯವರು ಮಾತನಾಡಿ, ಈ ಕುರಿತು ತುರ್ತಾಗಿ ಕಾರ್ಮಿಕ ನಿರೀಕ್ಷಕರಲ್ಲಿ (Labour Inspector) ಸಂಸ್ಥೆಯ ವಿರುದ್ಧ ಪ್ರಕರಣ ದಾಖಲಿಸುವಂತೆ ಈಗಾಗಲೇ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ತಿಳಿಸಿರುವುದಾಗಿ ಸಭೆಯ ಗಮನಕ್ಕೆ ತಂದರು.

ಪ್ರತಿಯಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಸಂಸ್ಥೆಯವರೇ ಹೈಕೋರ್ಟ್ ಮೂಲಕ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ನೋಟೀಸ್ ಕೊಟ್ಟಿದ್ದಾರೆ ಎಂದು ತಿಳಿಸಿ, ಮುಂದುವರಿದು ಮಾತನಾಡುತ್ತಾ, ಸದರಿ ಸಂಸ್ಥೆಯನ್ನು ಕಪ್ಪುಪಟ್ಟಿಗೆ ಸೇರಿಸಿ ಬೇರೆ ವ್ಯವಸ್ಥೆಮಾಡಿಕೊಳ್ಳಿ, MGNREGA ಬಾಕಿ ಇಟ್ಟು ಎನ್.ಬಿ.ಎ. ಪಾವತಿ ಮಾಡಿರುವ ಬಗ್ಗೆ ಪರಿಶೀಲಿಸಿ, ಈಗಿನ ಮಾನ್ಯ ಕೇಂದ್ರ ಆರ್.ಡಿ.ಪಿ.ಆರ್.ಸಚಿವರು MGNREGA ಅಡಿ ದನಗಳ ಕೊಟ್ಟಿಗೆ (Cow shed) ನಿರ್ಮಿಸಲು ತಿಳಿಸಿರುತ್ತಾರೆ, ಈ ಬಗ್ಗೆ ಪರಿಶೀಲಿಸಿ ಕ್ರಮವಹಿಸಿ ಎಂದು ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ತಿಳಿಸಿದರು.

ಜಿ.ಪಂ.ಮಾನ್ಯ ಸದಸ್ಯರಾದ ಡಾ: ರವಿಯವರು ಮಾತನಾಡಿ, ಕುಣಿಗಲ್ ತಾಲ್ಲೂಕು ಕಗ್ಗೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಟ್ಟಿಗೆಹಳ್ಳಿ ಗ್ರಾಮವು ಕಂದಾಯ ಗ್ರಾಮವಾಗಿದ್ದು, ಸದರಿ ಗ್ರಾಮವನ್ನು

MGNREGA ಅಡಿ ಪರಿಗಣಿಸಿರುವುದಿಲ್ಲ; ಸೇರ್ಪಡೆ ಮಾಡಲು ಅರ್ಜಿ ನೀಡಿ ಆರು ತಿಂಗಳಾದರೂ ಈ ವರೆಗೆ ಸೇರಿಸಿರುವುದಿಲ್ಲ ಎಂದು ಸಭೆಯ ಗಮನಕ್ಕೆ ತಂದರು. ಪ್ರತಿಯಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಎರಡು ದಿನಗಳೊಳಗೆ ಸಹಾಯಕ ನಿರ್ದೇಶಕರು(ಗ್ರಾ.ಉ) ಕುಣಿಗಲ್ ಇವರು ಎಂ.ಐ.ಎಸ್.ಕೋಆರ್ಡಿನೇಟರ್ ಒಡಗೂಡಿ ಎನ್.ಐ.ಸಿ.ಗೆ ಹೋಗಿ ಸದರಿ ಗ್ರಾಮವನ್ನು ಸೇರ್ಪಡೆ ಮಾಡಲು ಕ್ರಮವಹಿಸಬೇಕು ಎಂದು ಸೂಚಿಸಿದರು.

**(ಕ್ರಮ : ಉಪಕಾರ್ಯದರ್ಶಿ(ಅಭಿ), ಜಿ.ಪಂ.ತುಮಕೂರು)**

ಜಿ.ಪಂ. ಮಾನ್ಯ ಸದಸ್ಯರಾದ ಶ್ರೀ ಬಡೀರಣ್ಣ ನವರು ಮಾತನಾಡಿ, ಲೆಕ್ಕ ಶೀರ್ಷಿಕೆ 3054ರಡಿ ಕೇವಲ SDP ತಾಲ್ಲೂಕುಗಳಿಗೆ ಮಾತ್ರ ಕಾಮಗಾರಿ ಅನುಷ್ಠಾನಗೊಳಿಸಬೇಕೆಂದು ನಿರ್ದೇಶನವಿದ್ದು ಈ ಬಗ್ಗೆ ಸ್ಪಷ್ಟ ಮಾಹಿತಿ ನೀಡುವಂತೆ ಮುಖ್ಯ ಯೋಜನಾಧಿಕಾರಿಯವರನ್ನು ಕೋರಿದರು.

**ಅಂತಿಮವಾಗಿ ಯಾವುದೇ ಬದಲಾವಣೆಯಿಲ್ಲದೆ, 2013-14ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.**

**(ಕ್ರಮ : ಮುಖ್ಯ ಯೋಜನಾಧಿಕಾರಿ, ಜಿ.ಪಂ.ತುಮಕೂರು)**

**3. ಜಿಲ್ಲಾ ಪಂಚಾಯತ್ನ ವಿವಿಧ ಸ್ಥಾಯಿ ಸಮಿತಿಗಳ ನಿರ್ಣಯಗಳನ್ನು ಅನುಮೋದಿಸುವ ಬಗ್ಗೆ:-**

**ಎ. ದಿನಾಂಕ 23-05-2013 ರಂದು ನಡೆದ ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳು:**

ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿಯ ಅಧ್ಯಕ್ಷರು ಮಾತನಾಡಿ, ದಿನಾಂಕ 23-05-2012 ರಂದು ನಡೆದ ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳನ್ನು ಅನುಮೋದನೆಗಾಗಿ ಸಭೆಗೆ ಮಂಡಿಸಿದರು. ಕೂಲಂಕುಷವಾಗಿ ಪರಿಶೀಲಿಸಿದ ನಂತರ ಸದರಿ ನಿರ್ಣಯಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ಬಿ) ದಿನಾಂಕ 23-05-2013 ರಂದು ನಡೆದ ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳು:**

ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿಯ ಅಧ್ಯಕ್ಷರು ಮಾತನಾಡಿ, ದಿನಾಂಕ 23-05-2013 ರಂದು ನಡೆದ ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳನ್ನು ಅನುಮೋದನೆಗಾಗಿ ಸಭೆಗೆ ಮಂಡಿಸಿದರು. ಕೂಲಂಕುಷವಾಗಿ ಪರಿಶೀಲಿಸಿದ ನಂತರ ಸದರಿ ನಿರ್ಣಯಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ಸಿ) ದಿನಾಂಕ : 27-05-2013 ರಂದು ನಡೆದ ಸಾಮಾನ್ಯ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳು:**

ಸಾಮಾನ್ಯ ಸ್ಥಾಯಿ ಸಮಿತಿಯ ಅಧ್ಯಕ್ಷರು ಮಾತನಾಡಿ, ಅನುಮೋದನೆಗಾಗಿ ದಿನಾಂಕ : 27-05-2013 ರಂದು ನಡೆದ ಸಾಮಾನ್ಯ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳನ್ನು ಸಭೆಗೆ ಮಂಡಿಸಿದರು. ಕೂಲಂಕುಷವಾಗಿ ಪರಿಶೀಲಿಸಿದ ನಂತರ ಸದರಿ ನಿರ್ಣಯಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

ಕೂಲಂಕುಷವಾಗಿ ಪರಿಶೀಲಿಸಿದ ನಂತರ ಸದರಿ ನಿರ್ಣಯಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ಡಿ) ದಿನಾಂಕ : 27-05-2013 ರಂದು ನಡೆದ ಹಣಕಾಸು, ಲೆಕ್ಕ ಪರಿಶೋಧನಾ ಮತ್ತು ಯೋಜನಾ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳು:**

ಜಿ.ಪಂ.ನ ಮಾನ್ಯ ಅಧ್ಯಕ್ಷರು ದಿನಾಂಕ : 27-05-2013 ರಂದು ನಡೆದ ಹಣಕಾಸು ಲೆಕ್ಕ ಪರಿಶೋಧನಾ ಮತ್ತು ಯೋಜನಾ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳ ನಡವಳಿಯನ್ನು ಸಭೆಗೆ ಅನುಮೋದನೆಗಾಗಿ ಮಂಡಿಸಿದರು.

ಮಾನ್ಯ ಜಿ.ಪಂ. ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು ಮಾತನಾಡಿ, ಸರ್ಕಾರಿ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯ, ಗಂಗೋತ್ರಿ ನಗರ, ತುಮಕೂರು ಕಟ್ಟಡಕ್ಕೆ ಪರಿಷ್ಕೃತ ಬಾಡಿಗೆಯನ್ನು ಪಾವತಿಸುವ ಬಗ್ಗೆ ಪ್ರಸ್ತಾಪಿಸಿದ್ದು, ಸದರಿ ವಿಷಯವನ್ನು ಜಿಲ್ಲಾ ಪಂಚಾಯತ್ ಸಾಮಾನ್ಯ ಸ್ಥಾಯಿ ಸಮಿತಿ ಸಭೆಯಲ್ಲಿ ಮಂಡಿಸಿ ತೀರ್ಮಾನ ಕೈಗೊಳ್ಳುವಂತೆ ನಿರ್ಣಯಿಸಲಾಗಿರುತ್ತದೆ, ಆದರೆ ಇಂದಿನ ದಿನಗಳಲ್ಲಿ ವಿದ್ಯಾರ್ಥಿನಿಲಯಗಳಿಗೆ ಕಟ್ಟಡ ಬಾಡಿಗೆಗೆ ಸಿಗುವುದೇ ದುರ್ಲಭವಾಗಿರುವುದರಿಂದ ಪರಿಷ್ಕೃತ ಬಾಡಿಗೆ ಪಾವತಿ ಸಂಬಂಧ ತುರ್ತು ಅಗತ್ಯ ಕ್ರಮವಹಿಸಬೇಕೆಂದು ಆಗ್ರಹಿಸಿದರು. ಪ್ರತಿಯಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಘಟನೋತ್ತರ ಮಂಜೂರಾತಿ ನಿರೀಕ್ಷಿಸಿ, PWDಯವರು ನಿಗಧಿಪಡಿಸಿರುವ ಪರಿಷ್ಕೃತ ಬಾಡಿಗೆಯ ಬಾಕಿ ಮೊತ್ತವನ್ನು ಪಾವತಿಸಲು ಈ ಕೂಡಲೇ ಕ್ರಮವಹಿಸಲಾಗುವುದೆಂದು ತಿಳಿಸಿದರು.

**(ಕ್ರಮ : ಜಿಲ್ಲಾ ಸಮಾಜಕಲ್ಯಾಣಾಧಿಕಾರಿ, ಸಮಾಜ ಕಲ್ಯಾಣ ಇಲಾಖೆ, ತುಮಕೂರು)**

ನಂತರ ದಿನಾಂಕ : 27-05-2013 ರಂದು ನಡೆದ ಹಣಕಾಸು, ಲೆಕ್ಕ ಪರಿಶೋಧನಾ ಮತ್ತು ಯೋಜನಾ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳನ್ನು ಸಭೆಯು ಕೂಲಂಕುಷ ಪರಿಶೀಲಿಸಿ ಸರ್ವಾನುಮತದಿಂದ ಅನುಮೋದಿಸಿತು.

ಮುಖ್ಯ ಲೆಕ್ಕಾಧಿಕಾರಿಯವರು ಮಾತನಾಡಿ, ಜಿಲ್ಲಾ ಪಂಚಾಯತ್ 2012-13ನೇ ಸಾಲಿನ ಸ್ವೀಕೃತಿ ಮತ್ತು ವೆಚ್ಚದ ವಾರ್ಷಿಕ ಲೆಕ್ಕಗಳನ್ನು ಅನುಮೋದನೆಗೆ ಮಂಡಿಸಿದರು. ಕೂಲಂಕುಷ ಪರಿಶೀಲನೆಯ ನಂತರ 2012-13ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ಇ) ದಿನಾಂಕ 08-02-2013 ಹಾಗೂ ದಿನಾಂಕ 04-06-2013 ರಂದು ನಡೆದ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳು.**

ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಅಧ್ಯಕ್ಷರು ಮಾತನಾಡಿ, ದಿನಾಂಕ :08-02-2013 ಹಾಗೂ ದಿನಾಂಕ 04-06-2013 ರಂದು ನಡೆದ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಸಭೆಗಳ ನಿರ್ಣಯಗಳನ್ನು ಅನುಮೋದನೆಗಾಗಿ ಸಭೆಗೆ ಮಂಡಿಸಿದರು. ಕೂಲಂಕುಷವಾಗಿ ಪರಿಶೀಲಿಸಿದ ನಂತರ ಸದರಿ ನಿರ್ಣಯಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**4. ದಿನಾಂಕ 28-12-2012ರ ಸಾಮಾನ್ಯ ಸಭೆ ನಡವಳಿಯ ಅನುಪಾಲನಾ ವರದಿ ಬಗ್ಗೆ:-**

ದಿನಾಂಕ 28-12-2012ರಂದು ನಡೆದ ಜಿಲ್ಲಾ ಪಂಚಾಯತ್ ಸಾಮಾನ್ಯ ಸಭೆಯ ನಡವಳಿಗಳನ್ವಯ ಕೈಗೊಂಡ ಕ್ರಮದ ಬಗೆಗಿನ ಅನುಪಾಲನಾ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ ಸದರಿ ವರದಿಯನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

**5. ಅಧ್ಯಕ್ಷರ ಅಪ್ಪಣೆ ಮೇರೆಗೆ ಬರುವ ಇತರೆ ವಿಷಯಗಳು :-**

1. ಜಿ.ಪಂ. ಮಾನ್ಯ ಸದಸ್ಯರಾದ ಡಾ:ರವಿ ಯವರು ಮಾತನಾಡಿ, ಎಸ್.ಎಸ್.ಎ.ಅಡಿ ತುಮಕೂರು/ ಮಧುಗಿರಿ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರುಗಳು 2013-14ನೇ ಸಾಲಿಗೆ ಅನುದಾನ ಬಿಡಗಡೆ ಗೊಳಿಸಿಲ್ಲವೆಂದು ಆಕ್ಷೇಪಿಸಿದರು. ಪ್ರತಿಯಾಗಿ DDPI ರವರು ಮಾತನಾಡಿ, ಒಟ್ಟಾರೆ ಸುಮಾರು ರೂ.40.00ಕೋಟಿ ವೆಚ್ಚದಲ್ಲಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಕಟ್ಟಡ ಮತ್ತು ಶೌಚಾಲಯ ನಿರ್ಮಾಣ ಕಾಮಗಾರಿಗಳು ಪ್ರಾರಂಭವಾಗಿದ್ದು ಸಾಕಷ್ಟು ಕಟ್ಟಡಗಳು ಪೂರ್ಣಗೊಂಡಿರುತ್ತದೆ ಹಾಗೂ ಕೆಲವು ಕಟ್ಟಡಗಳು ಪ್ರಗತಿಯಲ್ಲಿರುತ್ತದೆ. ಜಿಲ್ಲೆಯ ಎಲ್ಲಾ 10 ತಾಲ್ಲೂಕುಗಳಲ್ಲಿ ಸಂಬಂದಪಟ್ಟ ಇಂಜಿನಿಯರ್ ಗಳು ಪರಿಶೀಲಿಸಿದ್ದು, ಪ್ರಸಕ್ತ ಮಾಹೆಯಲ್ಲಿ ಹೆಚ್ಚಿನ ಪ್ರಗತಿ ಸಾಧಿಸಲಾಗುವುದು ಎಂದು ತಿಳಿಸಿದರು.

ಮುಂದುವರೆದು ಮಾನ್ಯ ಸದಸ್ಯರು ಮಾತನಾಡುತ್ತಾ, ಕುಣಿಗಲ್ ತಾಲ್ಲೂಕು ಕೊಡವತ್ತಿ ಗ್ರಾಮದ ಸರ್ಕಾರಿ ಶಾಲೆಗೆ 8 ಶಿಕ್ಷಕರ ಹುದ್ದೆ ಮಂಜೂರಾಗಿದ್ದರೂ 2011ರಿಂದ ಇವರೆಗೆ ಕೇವಲ ಇಬ್ಬರು ಶಿಕ್ಷಕರು ಮಾತ್ರ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಸಭೆಯ ಗಮನಕ್ಕೆ ತಂದರು. ಪ್ರತಿಯಾಗಿ ಡಿ.ಡಿ.ಪಿ.ಐ., ತುಮಕೂರು ಇವರು ಮಾತನಾಡಿ, ಕುಣಿಗಲ್ ಮತ್ತು ತುರುವೇಕೆರೆ ತಾಲ್ಲೂಕುಗಳಲ್ಲಿ ಶಿಕ್ಷಕರುಗಳ ಕೊರತೆ ಬಹು ಮುಖ್ಯ ಸಮಸ್ಯೆಯಾಗಿದೆ; ತತ್ಸಂಬಂಧ ಹೆಚ್ಚುವರಿ ಶಿಕ್ಷಕರನ್ನು ನಿಯೋಜಿಸಲು ಕ್ರಮವಹಿಸಲಾಗಿದೆ; ಈ ಮಧ್ಯೆ ಸರ್ಕಾರದ ವತಿಯಿಂದ 60 ಮಂದಿ ಅವಧಿ ಶಿಕ್ಷಕರುಗಳನ್ನು ನೀಡಿದ್ದು, ಈ ಪೈಕಿ ಕುಣಿಗಲ್ ತಾಲ್ಲೂಕಿಗೆ 40 ಮಂದಿ ಮತ್ತು ತುರುವೇಕೆರೆ ತಾಲ್ಲೂಕಿಗೆ 20 ಮಂದಿಯನ್ನು ಸ್ಥಳ ನಿಯುಕ್ತಿ ಗೊಳಿಸಲಾಗಿರುತ್ತದೆ; ಆದಾ ಕೊರತೆಯ ಕುರಿತು ಶಿಕ್ಷಣ ಇಲಾಖೆಯ ಆಯುಕ್ತರೊಂದಿಗೆ ಸಮಾಲೋಚಿಸಲಾಗಿದ್ದು, ಸಧ್ಯದಲ್ಲಿಯೇ ಸಮಸ್ಯೆಯನ್ನು ಬಗೆಹರಿಸಿಕೊಡಲಾಗುವುದು ಎಂದು ಭರವಸೆ ನೀಡಿದರು.

2. ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ಚಂದ್ರಶೇಖರಬಾಬುರವರು ಮಾತನಾಡಿ, ಖಾಸಗಿ ಶಾಲೆಗಳಲ್ಲಿ (ಕಾನ್ವೆಂಟ್ಸ್) RTI ಅಡಿ ಪ್ರವೇಶ ಪಡೆದಿರುವ ಮಕ್ಕಳಿಗೆ ಶಾಲಾ ಸಮವಸ್ತ್ರ, ಪುಸ್ತಕ ಮತ್ತು ವಾಹನ ಸೌಲಭ್ಯ ಒದಗಿಸಲು ಹಣ ಕೇಳುತ್ತಿದ್ದಾರೆ ಎಂದು ಸಭೆಗೆ ತಿಳಿಸಿದರು. ಪ್ರತಿಯಾಗಿ, ಡಿ.ಡಿ.ಪಿ.ಐ., ತುಮಕೂರು ಇವರು ಮಾತನಾಡಿ, ಯಾವುದೇ ಹಣ ಕೇಳುವಂತಿಲ್ಲ ಎಂದು ತಿಳಿಸಿ, ಅಂತಹ ಯಾವುದೇ ಪ್ರಕರಣಗಳು ಇದ್ದಲ್ಲಿ ತಮ್ಮ ಗಮನಕ್ಕೆ ತಂದರೆ ಬಗೆಹರಿಸಿಕೊಡುವುದಾಗಿ ಭರವಸೆಯಿತ್ತರು.

3. ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ರವಿ ಹೆಬ್ಬಾಕ ರವರು ಮಾತನಾಡಿ, ಹೆಬ್ಬಾಕ ಗ್ರಾಮದ ಸರ್ಕಾರಿ ಶಾಲೆಯಲ್ಲಿನ ಮುಖ್ಯ ಶಿಕ್ಷಕರ ಹುದ್ದೆ ಕಳೆದ ಒಂದು ವರ್ಷದಿಂದ ಖಾಲಿಯಿರುತ್ತದೆ ಎನ್ನಲಾಗಿ, ಕೌನ್ಸಲಿಂಗ್ ಮುಗಿದ ಕೂಡಲೇ ವ್ಯವಸ್ಥೆಗೊಳಿಸಿ ಕೊಡುವುದಾಗಿ ಡಿ.ಡಿ.ಪಿ.ಐ.ರವರು ಭರವಸೆಯಿತ್ತರು.

4. ಜಿ.ಪಂ. ಮಾನ್ಯ ಸದಸ್ಯರಾದ ಶ್ರೀ ಸಿ.ಆರ್. ಉಮೇಶ್ ರವರು ಮಾತನಾಡಿ, ಸಮಾಜ ಕಲ್ಯಾಣ ಇಲಾಖಾ ವತಿಯಿಂದ ಪ್ರತಿಷ್ಟಿತ ಶಾಲೆಗೆ ಸೇರಿದ ಮಕ್ಕಳಿಗೆ ಸರ್ಕಾರದ ಅನುದಾನ ಬರುವವರೆಗೆ

ಪರಿಕರಗಳನ್ನು ನೀಡುವುದಿಲ್ಲ; (ಉದಾ : ಪ್ರೆಸಿಡೆನ್ಸಿ ಶಾಲೆಯಲ್ಲಿ 5 ಮಕ್ಕಳಿದ್ದಾರೆ) ಇದರಿಂದ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗುತ್ತದೆ ಎಂದು ಸಭೆಗೆ ತಿಳಿಸಿದರು. ಪ್ರತಿಯಾಗಿ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಯವರು ಮಾತನಾಡಿ, ಈ ವ್ಯವಸ್ಥೆಯನ್ನು ಕಳೆದ ವರ್ಷದಿಂದ ನಿಲ್ಲಿಸಿದ್ದಾರೆ. 2012-13ನೇ ಸಾಲಿನಲ್ಲಿ On-line ನಲ್ಲಿ ಬಿಡುಗಡೆ ಮಾಡಿ ಎಂದು ತಿಳಿಸಿರುತ್ತಾರೆ; ಅದರಂತೆ Account, e.fms ತರಿಸಿಕೊಂಡು feed ಮಾಡಲಾಗಿದೆ. ಹಣ ಬಿಡುಗಡೆಗೆ 15 ದಿನಗಳಾಗಬಹುದು; ಇದು ರಾಜ್ಯದ ಮೂವತ್ತೂ ಜಿಲ್ಲೆಗಳಲ್ಲಿರುವ ಸಮಸ್ಯೆ, ಕಾರಣ 2012-13ನೇ ಸಾಲಿನ ಹಣ ಬಿಡುಗಡೆಯಾಗಿರುವುದಿಲ್ಲ ಎಂದು ಸಭೆಗೆ ವಿವರಿಸಿದರು.

**(ಕ್ರಮ : ಡಿ.ಡಿ.ಪಿ.ಐ., ಸಾ.ಶಿ.ಇ., ತುಮಕೂರು/ಮಧುಗಿರಿ)**

**5.** ಮಧುಗಿರಿ ತಾಲ್ಲೂಕಿನ ಪುರವರ ಜಿ.ಪಂ. ಕ್ಷೇತ್ರ ವ್ಯಾಪ್ತಿಯ ಶ್ರೀಮತಿ ಸಿ.ಆರ್. ಮಂಜುಳ ಸದಸ್ಯರು ಮಾತನಾಡಿ, ನಾಗೇನಹಳ್ಳಿ ಮತ್ತು ಸುತ್ತ-ಮುತ್ತ ಗ್ರಾಮಗಳಲ್ಲಿ ಚಿಕೂನ್ ಗುನ್ಯ ಜಾಸ್ತಿ ಇದ್ದು ಸಾರ್ವಜನಿಕರು ತೊಂದರೆ ಅನುಭವಿಸುತ್ತಿದ್ದಾರೆ; ಆದುದರಿಂದ ಗ್ರಾಮಗಳಲ್ಲಿ ಸ್ವಚ್ಛತೆ ಕಾಪಾಡಿ, ಫಾಗಿಂಗ್ ಮಾಡಿಸುವಂತೆ ಕ್ರಮವಹಿಸಲು ಡಿ.ಹೆಚ್.ಓ.ರವರಿಗೆ ಸೂಚಿಸಬೇಕು ಎಂದು ಕೋರಿದರು.

ಸಭೆಯ ಮಾನ್ಯ ಅಧ್ಯಕ್ಷರು ಮಾತನಾಡಿ, ಫಾಗಿಂಗ್ ಮಾಡಿಸಲು ವ್ಯವಸ್ಥೆ ಗೊಳಿಸುವಂತೆ ಡಿ.ಹೆಚ್.ಓ.ರವರಿಗೆ ಸೂಚಿಸಿದರು.

6. ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ಆರ್.ಸಿ.ಅಂಜಿನಪ್ಪನವರು ಮಾತನಾಡಿ, ಜಿಲ್ಲಾ ಆರೋಗ್ಯ ಇಲಾಖೆಗೆ ಸಂಬಂಧಿಸಿದಂತೆ, ಪಾವಗಡ ತಾಲ್ಲೂಕು ಆಸ್ಪತ್ರೆಯ ಶುಚಿತ್ವದ ಗುತ್ತಿಗೆ ನಾಳೆಗೆ ಕೊನೆಗೊಳ್ಳುತ್ತದೆ, ನಾಡಿದ್ದಿನಿಂದ ಸ್ವಚ್ಛತೆಯ ನಿರ್ವಹಣೆ ಹೇಗೆ ಎಂದು ಚಿಂತೆಯಾಗಿದೆ ಎಂದು ಸಭೆಯ ಗಮನಕ್ಕೆ ತಂದರು. ಡಿ.ಹೆಚ್.ಓ.ರವರು ಮಾತನಾಡಿ, ಈ ಬಗ್ಗೆ ಸಂಬಂಧಪಟ್ಟ ವೈದ್ಯಾಧಿಕಾರಿಯವರನ್ನು ಸಂಪರ್ಕಿಸಿ ವ್ಯವಸ್ಥೆಗೊಳಿಸುವುದಾಗಿ ಭರವಸೆಯಿತ್ತರು. ಪ್ರತಿಯಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಗುತ್ತಿಗೆ ಅವಧಿ ಮುಕ್ತಾಯಗೊಂಡಿದ್ದ ಪಕ್ಷದಲ್ಲಿ ಅದೇ ಗುತ್ತಿಗೆಯನ್ನು ಮುಂದಿನ 3–4 ತಿಂಗಳುಗಳಿಗೆ ಮುಂದುವರೆಸಲು ಕ್ರಮವಹಿಸುವಂತೆ ತಿಳಿಸಿದರು.

7. ಜಿ.ಪಂ. ಮಾನ್ಯ ಸದಸ್ಯರಾದ ಶ್ರೀ ಸಿ.ಆರ್. ಉಮೇಶ್ ರವರು ಮಾತನಾಡಿ, ತಾಲ್ಲೂಕು ಕೇಂದ್ರದ ಆಸ್ಪತ್ರೆಗಳಲ್ಲಿ ಕರ್ತವ್ಯ ವೈದ್ಯರು ಮತ್ತು ತಜ್ಞ ವೈದ್ಯರ ಸೇವೆಯನ್ನು ಪ್ರಸೂತಿ ತಜ್ಞರು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳುವಂತೆ ಅಗತ್ಯ ಸೂಚನೆ ನೀಡಲು ಡಿ.ಹೆಚ್.ಓ.ರವರಿಗೆ ಸೂಚಿಸಬೇಕೆಂದು ಕೋರಿದರು. ಪ್ರತಿಯಾಗಿ ಡಿ.ಹೆಚ್.ಓ.ರವರು ಮಾತನಾಡಿ, ಶಿರಾ ತಾಲ್ಲೂಕು ಆಸ್ಪತ್ರೆಯಲ್ಲಿ ತಾಂತ್ರಿಕ ತೊಂದರೆ ಇರುವುದಾಗಿ ವೈದ್ಯಾಧಿಕಾರಿಗಳು ತಿಳಿಸಿರುತ್ತಾರೆ; ಅಲ್ಲಿ ಇಬ್ಬರು ಪ್ರಸೂತಿ ರೋಗ ತಜ್ಞರು ವೈದ್ಯರಿದ್ದಾರೆ; MBBS ವೈದ್ಯರು ಕರ್ತವ್ಯ ವೈದ್ಯರಿದ್ದಾರೆ; ಇಬ್ಬರು ತಜ್ಞ ವೈದ್ಯರಿರುವುದರಿಂದ ಸಮಸ್ಯೆ ಬಂದಲ್ಲಿ ತಜ್ಞ ವೈದ್ಯರು ಸಹಾಯ ಮಾಡುತ್ತಾರೆ; ಇಬ್ಬರೂ ತಜ್ಞರು ಶಸ್ತ್ರ ಚಿಕಿತ್ಸಾ ಕೊಠಡಿಯಲ್ಲಿದ್ದರೆ ಪ್ರಸೂತಿ ರೋಗ ತಜ್ಞರನ್ನು ನಿಗಾ ವಹಿಸಲು ತಜ್ಞ ವೈದ್ಯರು ಬೇಕು ಎನ್ನುತ್ತಾರೆ ಎಂದು ಸಭೆಗೆ ತಿಳಿಸಿದರು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಮೇಲ್ಕಂಡಂತೆ ತಜ್ಞ ವೈದ್ಯರುಗಳನ್ನು ನಿರ್ವಹಿಸಿ ಕ್ರಮವಹಿಸಲು ಸೂಚಿಸಿದರು.

8. ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ವೈ.ಹೆಚ್.ಹುಚ್ಚಯ್ಯನವರು ಮಾತನಾಡಿ, ಕುಣಿಗಲ್ ಟೌನ್ ನಲ್ಲಿ 100 ಹಾಸಿಗೆಗಳ ಆಸ್ಪತ್ರೆ ಇದೆ, ಅಲ್ಲಿ ವೈದ್ಯರುಗಳು ಬೆ.10 ಗಂಟೆಗೆ ಬರುತ್ತಾರೆ. ಅವರ ಹಾಜರಿ/ಗೈರು ಹಾಜರಿಯನ್ನು ಯಾರೂ ಗಮನಿಸುವುದಿಲ್ಲ. ನಾನು ಬೆಳಿಗ್ಗೆ9-30ಗಂಟೆಗೆ ರಕ್ತಪರೀಕ್ಷೆಗಾಗಿ ಆಸ್ಪತ್ರೆಗೆ ಹೋಗಿದ್ದ ಸಂದರ್ಭದಲ್ಲಿ ವೈದ್ಯರು/ಸಿಬ್ಬಂದಿ ಗಳಾಗಲೀ, ಯಾರೊಬ್ಬರೂ ಬಂದಿರಲಿಲ್ಲ; ಆಸ್ಪತ್ರೆಯಲ್ಲಿ ಶುಚಿತ್ವ ಇಲ್ಲದೆ ವಾಸನೆ ಬರುತ್ತಿತ್ತು; ಈ ಕುರಿತು ಡಿ.ಹೆಚ್.ಓ.ರವರಿಗೆ ದೂರವಾಣಿ ಮುಖೇನ ಮಾತನಾಡಿ ತಿಳಿಸಲಾಗಿ ಬೆ.10-00ಗಂಟೆಯ ನಂತರ ಮುಖ್ಯ ವೈದ್ಯಾಧಿಕಾರಿಗಳು ಬಂದು ಹಾಜರಾತಿ ಬಗ್ಗೆ ನಿಗಾ ವಹಿಸಿ ಸಂಬಂಧಪಟ್ಟವರಿಗೆ ನೋಟೀಸ್ ನೀಡುವುದಾಗಿ ತಿಳಿಸಿದರು; ನಂತರ ಡಿ.ಹೆಚ್.ಓ.ರವರು ಸದರಿ ಅಧಿಕಾರಿ ಪ್ರಸಕ್ತ ಮಾಸಾಂತ್ಯದಲ್ಲಿ ಸರ್ಕಾರಿ ಸೇವೆಯಿಂದ ವಯೋನಿವೃತ್ತಿ ಹೊಂದುತ್ತಿರುವುದರಿಂದ ಅವರಿಗೆ ತೊಂದರೆಯಾಗುವುದು ಬೇಡ ಎಂದು ಕೇಳಿಕೊಂಡಿರುತ್ತಾರೆ; ಆದರೆ ಇದರಿಂದ ಆಡಳಿತ ಸುಧಾರಣೆ ಆಗಲಿಲ್ಲ; ಪತ್ರಾಂಕಿತ ಸಹಾಯಕರು ಕರ್ತವ್ಯಕ್ಕೆ ವರದಿ ಮಾಡಿಕೊಂಡು ಎರಡೂವರೆ ವರ್ಷಗಳು ಕಳೆದಿದ್ದರೂ ಸಹ ಸಂಬಂಧಪಟ್ಟ ಕಾರ್ಯಭಾರವನ್ನು ವಹಿಸಿಕೊಳ್ಳದೆ ಕೇವಲ ಕಛೇರಿಗೆ ಬಂದು ಹಾಜರಾತಿ ನಮೂದಿಸಿ ವೇತನ ಪಡೆಯುತ್ತಿದ್ದಾರೆ; ಕಾರ್ಯಭಾರ ವಹಿಸಿಕೊಳ್ಳದಿದ್ದ ಮೇಲೆ ಅವರಿಗೆ ವೇತನ ಏಕೆ ಕೊಡುತ್ತಿರಿ? ಎಂದು ಕೇಳಿದರು. ಮುಂದುವರೆದು ಮಾತನಾಡುತ್ತಾ, ಸದರಿ ಆಸ್ಪತ್ರೆಯಲ್ಲಿ ಇಬ್ಬರೂ ಡಿ-ದರ್ಜೆ ನೌಕರರು User Amount ಮೇರೆಗೆ (ಮಾಸಿಕ ರೂ.3,000/- ದಿನದ 24ಗಂಟೆ ಕೆಲಸ) ಕಾರ್ಯನಿರ್ವಹಿಸುತ್ತಿದ್ದು, ಬೇರೆ ಗ್ರೂಪ್-ಡಿ ನೌಕರರು, ಗುತ್ತಿಗೆ ಆಧಾರದ ಸಿಬ್ಬಂದಿಗಳು ಎಲ್ಲರೂ ಇವರಿಗೆ ಕೆಲಸ ಹೇಳುತ್ತಾರೆ. ಈ ಕುರಿತು ಪರಿಶೀಲಿಸಿ ಅಗತ್ಯ ಕ್ರಮವಹಿಸಬೇಕೆಂದು ಸಭೆಗೆ ತಿಳಿಸಿದರು.

ಸಭೆಯ ಮಾನ್ಯ ಅಧ್ಯಕ್ಷರು ಮಾತನಾಡಿ, ಮಾನವೀಯತೆಯ ದೃಷ್ಟಿಯಿಂದ ಆಸ್ಪತ್ರೆಗಳಲ್ಲಿ ಶುಚಿತ್ವ ಕಾಪಾಡಿ, ಆಸ್ಪತ್ರೆಗೆ ಬರುವ ರೋಗಿಗಳಿಗೆ ಸೌಜನ್ಯಪೂರ್ವಕ ಸೇವೆ ನೀಡುವಂತೆ ಆಗಬೇಕು ಎಂದು ತಿಳಿಸಿದರು. ಪ್ರತಿಯಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಈ ಕುರಿತು ಪರಿಶೀಲಿಸಿ, 2-3ದಿನಗಳಲ್ಲಿ ಪರಿಸ್ಥಿತಿಯನ್ನು ಸರಿಪಡಿಸುವಂತೆ ತಿಳಿಸಿದರಲ್ಲದೆ ಮುಖ್ಯ ಲೆಕ್ಕಾಧಿಕಾರಿಗಳು ಮತ್ತು ಡಿ.ಹೆಚ್.ಓ.ರವರು ಮಾನ್ಯ ಸದಸ್ಯರಾದ ಶ್ರೀ ವೈ.ಹೆಚ್.ಹುಚ್ಚಯ್ಯನವರೊಂದಿಗೆ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲಿಸಿ ವರದಿ ಸಲ್ಲಿಸುವಂತೆ ತಿಳಿಸಿದರು. ಸಭೆಯ ಮಾನ್ಯ ಅಧ್ಯಕ್ಷರು ಮಾತನಾಡಿ, ಸಾಧ್ಯವಾದಲ್ಲಿ ತಾವು ಕೂಡ ಆಸ್ಪತ್ರೆಗೆ ಭೇಟಿ ನೀಡಲು ಬರುವುದಾಗಿ ತಿಳಿಸಿದರು.

9. ಜಿ.ಪಂ. ಮಾನ್ಯ ಸದಸ್ಯರಾದ ಶ್ರೀಮತಿ ಜಾನಮ್ಮ ರಾಮಚಂದ್ರಯ್ಯ ನವರು ಮಾತನಾಡಿ, ಚಿ.ನಾ.ಹಳ್ಳಿ ತಾಲ್ಲೂಕು ಹಂದನಕೆರೆ ಪಿ.ಹೆಚ್.ಸಿ.ಯಲ್ಲಿ ವೈದ್ಯರು 2 ದಿನಕ್ಕೊಮ್ಮೆ ಕೆಲಸಕ್ಕೆ ಬರುತ್ತಾರೆ; ಸದರಿ ಗ್ರಾಮದಲ್ಲಿ ಮಲೇರಿಯಾ ಖಾಯಿಲೆ ಜಾಸ್ತಿಯಾಗಿದೆ; ದೊಡ್ಡೇಣೆಗೆರೆ ಗೇಟ್ ಆಸ್ಪತ್ರೆಯಲ್ಲಿ ಯಾರೂ ಸಿಬ್ಬಂದಿ ಇರುವುದಿಲ್ಲ; ಮಹಿಳಾ ವೈದ್ಯರು ಪ್ರತಿ ದಿನ ಮಧ್ಯಾಹ್ನ 2-00 ಗಂಟೆಗೆ ಬೆಂಗಳೂರಿಗೆ ಹೊರಟು ಹೋಗುತ್ತಾರೆ; ಈ ಬಗ್ಗೆ ಪರಿಶೀಲಿಸಿ ಕ್ರಮವಹಿಸಬೇಕು ಎಂದು ಡಿ.ಹೆಚ್.ಓ. ರವರಿಗೆ ತಿಳಿಸಿದರು.

10.ಸಭೆಯ ಮಾನ್ಯ ಅಧ್ಯಕ್ಷರು ಮಾತನಾಡಿ, ಎಲೆರಾಂಪುರ ಪಿ.ಹೆಚ್.ಸಿ.ಯ ವೈದ್ಯರನ್ನು ಬದಲಾಯಿಸುವ ಕುರಿತು ಒಮ್ಮೆ ನಾವು-ನೀವು ಹೋಗಿ ಸ್ಥಳೀಯರನ್ನು ಸಂಪರ್ಕಿಸಿ ಪರಿಶೀಲಿಸಿದ ನಂತರ ಬೇರೆ ವೈದ್ಯರನ್ನು ನಿಯೋಜಿಸಿ ಕೊಡಬೇಕು ಎಂದು ಡಿ.ಹೆಚ್.ಓ.ರವರಿಗೆ ತಿಳಿಸಿದರು.

**(ಕ್ರಮ : ಡಿ.ಹೆಚ್.ಓ., ಆರೋಗ್ಯ ಇಲಾಖೆ, ತುಮಕೂರು)**

11. ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ಕೆಂಚಮಾರಯ್ಯನವರು ಮಾತನಾಡಿ, ಕಳೆದ ಎರಡು ವರ್ಷಗಳ ಹಿಂದೆ ದಿನಗೂಲಿ ನೌಕರರ ವೇತನ ಮತ್ತು ನಿರ್ವಹಣಾ ಭತ್ಯೆಯನ್ನು ಪರಿಷ್ಕೃತಗೊಳಿಸಲಾಗಿದ್ದು, ಈವರೆಗೆ ಅವರುಗಳಿಗೆ ಪರಿಷ್ಕೃತ ದರವನ್ನು ಪಾವತಿಸುತ್ತಿಲ್ಲ, ಈ ಬಗ್ಗೆ ಪರಿಶೀಲಿಸಿ ವ್ಯವಸ್ಥೆ ಗೊಳಿಸಿ ಕೊಡಬೇಕು ಎಂದು ಸಭೆಯ ಗಮನಕ್ಕೆ ತಂದರು.

12. ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ವೈ.ಹೆಚ್.ಹುಚ್ಚಯ್ಯನವರು ಮಾತನಾಡಿ, ಬೇರೆ ಜಿಲ್ಲೆಗಳಲ್ಲಿ ಕೊಟ್ಟಿದ್ದಾರೆ, ನಮ್ಮ ಜಿಲ್ಲೆಯಲ್ಲಿಯೂ ಸಹ ಕೆಲವು ತಾಲ್ಲೂಕುಗಳಲ್ಲಿ ಕೊಟ್ಟಿದ್ದಾರೆ, ಉಳಿದ ತಾಲ್ಲೂಕುಗಳಲ್ಲಿ ಕೊಡುತ್ತಿಲ್ಲ ಎಂದು ಸಭೆಯ ಗಮನಕ್ಕೆ ತಂದರು.

ಉತ್ತರವಾಗಿ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ತುಮಕೂರು ಇವರು ಮಾತನಾಡಿ, ಎಸ್.ಆರ್. ದರದಂತೆ ರೂ.3,823/-ನೀಡುತ್ತಿದ್ದು, ಪ್ರಸ್ತುತ ರೂ.7,851/-ನ್ನು ನೀಡಲಾಗುತ್ತಿದೆ. ಮೊದಲು ದಿನ ಒಂದಕ್ಕೆ ರೂ. 188/- ಇದ್ದು, ಈಗ ರೂ.288ಕ್ಕೆ ಅನುಮೋದನೆ ಯಾಗಿರುತ್ತದೆ. ಜಿಲ್ಲಾ ಪಂಚಾಯತ್ ಅನುಮೋದನೆಯನ್ನು ಹಿಂಪಡೆದಿರುತ್ತಾರೆ(withdraw). ಇದು ಹಣಕಾಸು ವಿಷಯವಾದ್ದರಿಂದ ಆಡಿಟ್ ಆಕ್ಷೇಪಣೆಯಾಗಬಹುದೆಂದು ಪರಿಷ್ಕೃತ ದರದ ಬಗ್ಗೆ ಅನುಮೋದನೆಗೆ ಅಧೀಕ್ಷಕ ಇಂಜಿನಿಯರ್ ರವರಿಗೆ ಸ್ಪಷ್ಟೀಕರಣ ಕೋರಿ ಪತ್ರ ಬರೆಯಲಾಗಿದೆ, ಅವರಿಂದ ಸ್ಪಷ್ಟೀಕರಣ ಬಂದ ಕೂಡಲೇ ಬಾಕಿ ಪಾವತಿಗೆ ಕ್ರಮವಹಿಸಲಾಗುವುದು ಎಂದು ಸಭೆಗೆ ತಿಳಿಸಿದರು.

ಪೂರಕವಾಗಿ ಉಪ ಕಾರ್ಯದರ್ಶಿ(ಅಭಿವೃದ್ಧಿ)ಯವರು ಮಾತನಾಡಿ, ಬೇರೆಡೆಯ ಕಡತ ತರಿಸಿಕೊಂಡು ನೋಡಲಾಗಿದೆ; ಈ ಬಗ್ಗೆ ವೇತನ ಪಾವತಿಸಲು ಜಿಲ್ಲಾ ಪಂಚಾಯತ್ ನಿಂದ ಆಡಳಿತಾತ್ಮಕ ಅನುಮೋದನೆಯಾಗಬೇಕು. ಪರಿಷ್ಕೃತ ದರವನ್ನು ಅಳವಡಿಸಲು ಸ್ಪಷ್ಟೀಕರಣ ಕೋರಿ ಆಡಳಿತ ಶಾಖೆಯಿಂದ ದಿನಾಂಕ:17-01-2013ರಂದು ಲೆಕ್ಕಾಧಿಕಾರಿಯವರಿಗೆ ಪತ್ರ ಬರೆದಿರುತ್ತಾರೆ ಎಂದು ಸಭೆಗೆ ತಿಳಿಸಿದರು. ಪೂರಕವಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಕಾರ್ಯಪಾಲಕ ಇಂಜಿನಿಯರ್, ಉಪ ಕಾರ್ಯದರ್ಶಿ(ಆಡಳಿತ) ರವರುಗಳು ಜೊತೆಗೂಡಿ ಬೇರೆ ಜಿಲ್ಲೆಯಂತೆ ನಮ್ಮ ಜಿಲ್ಲೆಯಲ್ಲಿಯೂ ತುರ್ತು ಅಗತ್ಯ ಕ್ರಮವಹಿಸಬೇಕು ಎಂದು ತಿಳಿಸಿದರು.

**(ಕ್ರಮ : ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ತುಮಕೂರು /ಮಧುಗಿರಿ)**

13. ಜಿ.ಪಂ. ಮಾನ್ಯ ಸದಸ್ಯರಾದ ಶ್ರೀಮತಿ ಜಾನಮ್ಮ ರಾಮಚಂದ್ರಯ್ಯ ನವರು ಮಾತನಾಡಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಸಂಬಂಧಿಸಿದಂತೆ, ಚಿ.ನಾ.ಹಳ್ಳಿ ತಾಲ್ಲೂಕಿನಲ್ಲಿ ಒಂದು ಅನಾಥ ಮಕ್ಕಳ ಕುಟೀರವನ್ನು ತೆರೆಯಲು ಅನುಮತಿ ನೀಡಬೇಕು ಎಂದು ಕೋರಿದರು, ಮುಂದುವರೆದು, ತಾಲ್ಲೂಕಿನ ಕೆಂಗಾಲಪುರ ಪಾಳ್ಯ , ದವನ ಹೊಸಹಳ್ಳಿ, ಹಂದನಕೆರೆ ಪಂಚಾಯತಿಗಳಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಸರಿಯಾಗಿ ಕೆಲಸ ಮಾಡುತ್ತಿಲ್ಲ ಹಾಗೂ ಗರ್ಭಿಣಿಯರಿಗೆ ಮತ್ತು ಬಾಣಂತಿಯರಿಗೆ ಸರಿಯಾಗಿ ಆಹಾರ ಕೊಡುತ್ತಿಲ್ಲ; ಈ ಬಗ್ಗೆ ಪರಿಶೀಲಿಸಿ, ಕ್ರಮವಹಿಸಿ ಮಾಹಿತಿ ಒದಗಿಸಬೇಕು ಎಂದು ಸಭೆಗೆ ತಿಳಿಸಿದರು. ಪ್ರತಿಯಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ,ಅನಾಥ ಮಕ್ಕಳ ಕುಟೀರ ಮಂಜೂರಾತಿಗೆ ತಾಲ್ಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಯವರಿಂದ ಪ್ರಸ್ತಾವನೆ ಬಂದಲ್ಲಿ ಅದನ್ನು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಸಭೆಯಲ್ಲಿ ಮಂಡಿಸಿ ಪರಿಶೀಲಿಸಲಾಗುವುದು ಎಂದು ತಿಳಿಸಿ, ಗರ್ಭಿಣಿಯರು ಮತ್ತು ಬಾಣಂತಿಯರಿಗೆ ಅಸಮರ್ಪಕ ಆಹಾರ ನೀಡುತ್ತಿರುವ ಕುರಿತು ಪರಿಶೀಲಿಸುವಂತೆ ಮಹಿಳಾಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರಿಗೆ ಸೂಚಿಸಿದರು

**( ಕ್ರಮ : ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತುಮಕೂರು)**

14. ಜಿ.ಪಂ. ಮಾನ್ಯ ಸದಸ್ಯರಾದ ಶ್ರೀ ರಾಮಚಂದ್ರಯ ನವರು ಮಾತನಾಡಿ, ತುಮಕೂರು ತಾಲ್ಲೂಕು ಮಸ್ಕಲ್ ಗ್ರಾ.ಪಂ. ವ್ಯಾಪ್ತಿಯ ಬಿದರೆಕಟ್ಟೆ ಗ್ರಾಮದಲ್ಲಿ ರಸ್ತೆ ಮಧ್ಯದಲ್ಲಿ ಶೌಚಾಲಯ ನಿರ್ಮಾಣ ಮಾಡಿಕೊಂಡಿರುತ್ತಾರೆ; ಇದರಿಂದ ಬೇರೆ ರಸ್ತೆ ಇಲ್ಲದೆ ಸಾರ್ವಜನಿಕರಿಗೆ ಓಡಾಡಲು ತೊಂದರೆಯಾಗಿರುತ್ತದೆ; ಈ ಬಗ್ಗೆ ಪರಿಶೀಲಿಸಿ ಕ್ರಮವಹಿಸುವಂತೆ 2011ರಲ್ಲಿ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಅರ್ಜಿ ಕೊಟ್ಟಿರುತ್ತೇನೆ, ಆದರೆ ಅವರು ಸದರಿ ಶೌಚಾಲಯ ತೆರವುಗೊಳಿಸಲು ಈವರೆವಿಗೂ ಯಾವುದೇ ಕ್ರಮವಹಿಸಿರುವುದಿಲ್ಲವೆಂದು ತಿಳಿಸಿ, ಈ ಸಂಬಂಧ 2013ರಲ್ಲಿ ಜಿ.ಪಂ.ಗೂ ಅರ್ಜಿ ಕೊಟ್ಟಿರುತ್ತೇನೆ; ಆದುದರಿಂದ ಈ ಬಗ್ಗೆ ಪರಿಶೀಲಿಸಿ ಸದರಿ ಶೌಚಾಲಯವನ್ನು ತೆರವುಗೊಳಿಸಿ, ರೈತರ ಹಿತ ಕಾಪಾಡುವ ನಿಟ್ಟಿನಲ್ಲಿ ರೈತರು ತಮ್ಮ-ತಮ್ಮ ಹೊಲಗಳಿಗೆ ಓಡಾಡಲು ಅನುಕೂಲ ಕಲ್ಪಿಸಿಕೊಡಬೇಕು ಎಂದು ಕೋರಿದರು.

ಉತ್ತರವಾಗಿ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಈ ಕುರಿತು ಪರಿಶೀಲಿಸಲಾಗಿ ಈಗಾಗಲೇ ಪೋಲೀಸ್ ಠಾಣೆಯಲ್ಲಿ ದೂರು ನೀಡಿರುತ್ತಾರೆ; ಹಾಗೂ ಪ.ಜಾ/ಪ.ಪಂ. ಕೋಶಕ್ಕೂ ಸಹ ದೂರು ನೀಡಿರುತ್ತಾರೆ; ಆದರೆ ಸದರಿ ಶೌಚಾಲಯ ನಿರ್ಮಿಸಿರುವ ಜಾಗವು ರಸ್ತೆಯಲ್ಲದೆ ಕೇವಲ Conservency ಆಗಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು. ಪ್ರತಿಯಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಸಂಬಂಧಪಟ್ಟ ಪಿ.ಡಿ.ಓ./ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಜಿ.ಪಂ. ಸದಸ್ಯರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಸಮಸ್ಯೆಯನ್ನು ಬಗೆಹರಿಸಿಕೊಡುವಂತೆ ತಿಳಿಸಿದರು.

**( ಕ್ರಮ : ಉಪ ಕಾರ್ಯದರ್ಶಿ(ಅಭಿ), ಜಿ.ಪಂ.ತುಮಕೂರು)**

15. ಜಿ.ಪಂ. ಮಾನ್ಯ ಸದಸ್ಯರಾದ ಶ್ರೀ ಉಗ್ರಯ್ಯ ನವರು ಮಾತನಾಡಿ, ವಸತಿ ಯೋಜನೆಯಡಿ ಆಯ್ಕೆಗೊಂಡ ಫಲಾನುಭವಿಗಳು ಮನೆ ನಿರ್ಮಾಣ ಮಾಡಿಕೊಂಡಿದ್ದರೂ ಸಹ ಅವರುಗಳನ್ನು ಕಪ್ಪು ಪಟ್ಟಿಗೆ ಸೇರಿಸಿ ಹಣ ಬಿಡುಗಡೆ ಮಾಡದೆ ತೊಂದರೆ ಮಾಡಿರುವುದಾಗಿ ಸಭೆಯ ಗಮನಕ್ಕೆ ತಂದರು. ಪ್ರತಿಯಾಗಿ ಯೋಜನಾ ನಿರ್ದೇಶಕರು ಮಾತನಾಡಿ, ಮಂಜೂರಾದ 90 ದಿನಗಳಲ್ಲಿ ಮನೆ ನಿರ್ಮಾಣ ಮಾಡಿಕೊಳ್ಳದಿದ್ದರೆ ತಾನೇ ತಾನಾಗಿ Block ಆಗುತ್ತದೆ (As per software) ಎಂದು ಸಭೆಗೆ ತಿಳಿಸಿದರು. ಮುಂದುವರೆದು ಮಾನ್ಯ ಸದಸ್ಯರು ಮಾತನಾಡಿ, ಸದರಿ ಫಲಾನುಭವಿಗೆ ಮನೆ ಮಂಜೂರಾದ ಎರಡೂವರೆ ತಿಂಗಳ ನಂತರ ಆದೇಶ ನೀಡಿರುತ್ತಾರೆ; ಇದರಿಂದಾಗಿ ಫಲಾನುಭವಿಯು ತಳಪಾಯ ನಿರ್ಮಿಸಿರುತ್ತಾರೆ ಎಂದು ಸಭೆಗೆ ತಿಳಿಸಿದರು. ಪ್ರತಿಯಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಸದರಿ ಫಲಾನುಭವಿಗೆ 5-6 ಬಾರಿ ನೋಟೀಸ್ ನೀಡಿದ್ದಾಗ್ಯೂ ಅವರು ಮನೆ ನಿರ್ಮಾಣಕ್ಕೆ ಮುಂದೆ ಬಂದಿಲ್ಲವೆಂದು ತಿಳಿಸಿದರು. ವಸತಿ ಯೋಜನೆಯಡಿ ಸಾವಿರಾರು ಮನೆಗಳು ಹಾಗೂ ಬಸವ ವಸತಿ/ಆಶ್ರಯ ಯೋಜನೆಯಡಿ ಸುಮಾರು 14 ಸಾವಿರ ಮನೆಗಳು ಇದೇ ರೀತಿಯಾಗಿವೆ. ಇದು ರಾಜ್ಯ ಮಟ್ಟದ ಸಮಸ್ಯೆಯಾಗಿರುವುದರಿಂದ, ಈ ಸಂಬಂಧ RGRHCL ರವರನ್ನು ಕೇಳಿಕೊಂಡರೆ ರದ್ದಾಗಿರುವ (Block) ಮನೆಗಳಿಗೆ ಹಣ ನೀಡಲು ಸರ್ಕಾರದ ಮಟ್ಟದಲ್ಲಿ ತೀರ್ಮಾನವಾಗುತ್ತದೆ. ಪುನ: ಫಲಾನುಭವಿ ಪ್ರಾರಂಭಿಸಿದರೆ ಅಂತಹ ಮನೆಗಳಿಗೆ ಸ್ಥಳ ಪರಿಶೀಲನೆ ವರದಿ ಪಡೆದು ಬ್ಲಾಕ್ ತೆರವು ಗೊಳಸಬಹುದೆಂದು ತಿಳಿಸಿದರು.

**(ಕ್ರಮ : ಯೋಜನಾ ನಿರ್ದೇಶಕರು (ಡಿ.ಆರ್.ಡಿ.ಎ), ಜಿ.ಪಂ., ತುಮಕೂರು)**

16. ಮಾನ್ಯ ಸದಸ್ಯರು ಮುಂದುವರೆದು ಮಾತನಾಡುತ್ತಾ, ದೊಡ್ಡೇರಿ ಹೋ: ತಿಪ್ಪನಹಳ್ಳಿ ಗ್ರಾಮದಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆ ಬಾವಿ ಕೊರೆದು ಪಂಪು, ಮೋಟಾರ್ ನೀಡಿಯೂ ಸಹ ಅಳವಡಿಸಿಲ್ಲದಿರುವುದರಿಂದ ನೀರಿಗೆ ತೊಂದರೆಯಾಗಿದೆ ಎಂದು ತಿಳಿಸಿ, ಈ ಕುರಿತು ಪರಿಶೀಲಿಸಿ ಅಗತ್ಯ ಕ್ರಮ ವಹಿಸಬೇಕೆಂದು ಜಿಲ್ಲಾ ವ್ಯವಸ್ಥಾಪಕರು, ಡಾ:ಅಂಬೇಡ್ಕರ್ ಅಭಿವೃದ್ಧಿ ನಿಗಮ ಇವರಿಗೆ ತಿಳಿಸಿದರು.

**(ಕ್ರಮ : ಜಿಲ್ಲಾ ವ್ಯವಸ್ಥಾಪಕರು, ಡಾ:ಅಂಬೇಡ್ಕರ್ ಅಭಿವೃದ್ಧಿ ನಿಗಮ, ತುಮಕೂರು)**

17. ಜಿ.ಪಂ.ಮಾನ್ಯ ಸದಸ್ಯರಾದ ಶ್ರೀ ಕೆಂಚಮಾರಯ್ಯನವರು ಮಾತನಾಡಿ, ಆಹಾರ ಸಾಮಗ್ರಿ ಸರಬರಾಜಿನ ಕುರಿತು ಮಾಹಿತಿ ಒದಗಿಸುವಂತೆ ಕೋರಲಾಗಿ, ಜಿಲ್ಲಾ ಅಧಿಕಾರಿ, ಬಿ.ಸಿ.ಎಂ.ಇಲಾಖೆ ಇವರು ಮಾತನಾಡಿ, ಆಹಾರ ಸಾಮಗ್ರಿ ಸರಬರಾಜು ಮಾಡಲು ರಾಜ್ಯಮಟ್ಟದಲ್ಲಿ ಟೆಂಡರ್ ಕರೆದಿದ್ದಾರೆ; ಕೆ.ಸಿ.ಸಿ.ಎಫ್.ನಿಂದ ನಿಗಧಿತ ದಿನಾಂಕದಂದು ಸರಬರಾಜು ಮಾಡಬೇಕೆಂದು ಆದೇಶವಿದೆ; ರಾಗಿ, ರವೆ ಉತ್ಕೃಷ್ಟವಿಲ್ಲವೆಂದು ದೂರು ಬಂದಿದೆ ಈ ಕುರಿತು ಆಹಾರ ಇಲಾಖೆಯವರು ಮಧ್ಯಸ್ಥಿಕೆ ವಹಿಸಿದ್ದಾರೆ; ಅವರು ಆಹಾರ ಸಾಮಗ್ರಿ ಸರಬರಾಜು ಮಾಡಿದರೆ ಸಮಸ್ಯೆಯನ್ನು ಬಗೆಹರಿಸಲಾಗುವುದು ಎಂದು ಸಭೆಗೆ ತಿಳಿಸಿದರು.

**( ಕ್ರಮ : ಜಿಲ್ಲಾ ಅಧಿಕಾರಿ, ಬಿ.ಸಿ.ಎಂ.ಇಲಾಖೆ, ತುಮಕೂರು)**

**ಅಧ್ಯಕ್ಷರ ಅಪ್ಪಣೆ ಮೇರೆಗೆ ತುಮಕೂರು ಜಿಲ್ಲಾ ಪಂಚಾತ್ ನ 2012-13ರ ಆಡಳಿತ ವರದಿ ಮುದ್ರಿಸಿ ಸರ್ಕಾರಕ್ಕೆ ಕಳುಹಿಸಲು ಸಭೆ ಒಪ್ಪಿಗೆ ನೀಡಿತು.**

**ಜಿಲ್ಲಾ ಪಂಚಾಯತ್ ಸದಸ್ಯರುಗಳಾದ ಶ್ರೀ ಬಿ.ಕೆ.ಬಡೀರಣ್ಣ, ತಾವರೆಕೆರೆ ಜಿ.ಪಂ.ಕ್ಷೇತ್ರ,ಶಿರಾ ತಾಲ್ಲೂಕು ಶ್ರೀ ವೈ.ವಿ.ಅರುಣ್ ಕುಮಾರ್, ಯಡೇಯೂರು ಜಿ.ಪಂ ಕ್ಷೇತ್ರ, ಕುಣಿಗಲ್ ತಾಲ್ಲೂಕು ಹಾಗೂ ಶ್ರೀಮತಿ ರೇಖಾ ಕೆ.ಓ.ಆಂಜನೇಯಲು ಕೋಟಗುಡ್ಡ ಜಿ.ಪಂ ಕ್ಷೇತ್ರ, ಪಾವಗಡ ತಾಲ್ಲೂಕು ಇವರುಗಳನ್ನು ಅನುಸೂಚಿತ ಬುಡಕಟ್ಟು ಮತ್ತು ಇತರೆ ಪಾರಂಪರಿಕ ಅರಣ್ಯ ವಾಸಿಗಳ ಜಿಲ್ಲಾ ಮಟ್ಟದ ಸಮಿತಿಗೆ ನಾಮ ನಿರ್ದೇಶನ ಮಾಡಲಾಗಿದೆ.**

ಚರ್ಚಿಸತಕ್ಕ ವಿಷಯಗಳು ಮುಕ್ತಾಯವಾದುದರಿಂದ ವಂದನಾರ್ಪಣೆ ಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಅಧ್ಯಕ್ಷರು,
ಜಿಲ್ಲಾ ಪಂಚಾಯತ್, ತುಮಕೂರು.